ನಾನೊಬ್ಬನೇ ನೋಟಿಫಿಕೇಷನ್ ಇಶ್ಯೂ ಆದರೆ, ಮನೆಯಲ್ಲಿ ಇರಬೇಕಾದವನು.

ಶ್ರೀ ಕೆ.ಎನ್.ನಾಗೇಗೌಡ:- ವಿರೋಧಪಕ್ಷದವರು ಯಾವಾಗಲೂ ಮಂತ್ರಿಗಳು ಇಲ್ಲ ಮುಖ್ಯ ಮಂತ್ರಿಗಳು ಇಲ್ಲ, ಸದನ ನಡೆಯುವುದಿಲ್ಲ, ಸದನಕ್ಕೆ ಕಾಲಾವಕಾಶ ಇಲ್ಲ ಎನ್ನುವುದನ್ನು ಕೇಳಿದ್ದೇವೆ. ಆದರೆ, ಒಂದು ರೆಕಗ್ನಿಷನ್ ವಿರೋಧ ಪಕ್ಷದ ಪೂರ್ಣ ಸದಸ್ಯರು ಹೊರಗಡೆ ಹೋಗುತ್ತಾರೆಂದು ಹೇಳಿದರೆ ಹೇಗೆ? ವಿರೋಧ ಪಕ್ಷವಾಗಿ ಅವರು ಯಾವ ರೀತಿ ಬಿಹೇವ್ ಮಾಡುತ್ತಾರೆ ಎನ್ನುವುದಕ್ಕೆ, ಇದಕ್ಕಿಂತ ಎಕ್ಸಾಂಪಲ್ ಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಇಲ್ಲಿ ಸಭೆ ನಡೆಯುತ್ತಾ ಇದೆ, ಮುಖ್ಯ ಮಂತ್ರಿಗಳು ಬಳ್ಳಾರಿಗೆ ಯಾವುದೋ ಉದ್ಘಾಟನೆಗೆ ಹೋಗಿದ್ದಾರೆ, ರಾಜ್ಯಾದ್ಯಂತ ತಿರುಗುತ್ತಿದ್ದಾರೆ. ಎಲ್ಲಾದರೂ ಉಂಟೇ, ಸಭೆ ನಡೆಯುವಾಗ,

ಅಧ್ಯಕ್ಷರು:- ಇದೂ ಅಲ್ಲದೆ, ಅನೇಕ ಜನ ನಮ್ಮ ಸದಸ್ಯರುಗಳು ಕೂಡ ನಮ್ಮ ಸ್ನೇಹಿತರುಗಳು, ಹೇಳಿದ ಮಾತಿನ ಪ್ರಕಾರ ನಡೆದುಕೊಳ್ಳುವುದಿಲ್ಲ. ಬರುತ್ತೇನೆಂದು ಹೇಳಿ, ಹಾಗೆಯೇ ಹೊರಟು ಹೋಗುವವರು ಇಲ್ಲವೇ. ನಿಮಗೆ ಅನುಭವ ಆಗಿಲ್ಲವೇ.

ಶ್ರೀ ಮಂಜುನಾಥ ಸಿ.ಕುನ್ನೂರ್:- ಸಭಾ ನಾಯಕರು ಇಲ್ಲದೇ ಸಭೆ ನಡೆಸುವುದು ಒಳ್ಳೆಯದಲ್ಲ.

ಶ್ರೀ ವಾಟಾಳ್ ನಾಗರಾಜ್:- ಅವರು ಇದ್ದಾರೆ, ಬರೆದುಕೊಳ್ಳುತ್ತಾರೆಂಬುದಲ್ಲ. ಇಂತಹ ಪ್ರಾಮುಖ್ಯವಾದ ವಿಷಯ ಚರ್ಚೆಯಾಗುತ್ತಿದೆ. ಕೃಷ್ಣ ಬಗ್ಗೆ ಬಹಳ ಗಾಂಭೀರ್ಯವಾದ ಚರ್ಚೆ ಆಗುತ್ತಿದೆ. ಇದನ್ನು ಕೇಳತಕ್ಕಂಥ ಮುಖ್ಯ ಮಂತ್ರಿಗಳು, ಪ್ರಾಮಾಣಿಕವಾಗಿ, ನಾನೇನು ಅವರನ್ನು ತೆಗಳಬೇಕಂದಲ್ಲ. ಹಾಗಾದರೆ, ಅವರಿಗೆ ಕೃಷ್ಣಾ ಬಗ್ಗೆ ಎಷ್ಟು ಕಾಳಜಿ ಇದೆ? ಇದು ನಿಜವಾಗಿಯೂ ಬಹಳ ಪ್ರಾಮುಖ್ಯತೆ ಇರತಕ್ಕಂತಾದ್ದು ಮುಖ್ಯ ಮಂತ್ರಿಗಳು ಇಲ್ಲದೇ ಚರ್ಚೆ ಮಾಡುವುದು ಪ್ರಯೋಜನವಿಲ್ಲ. ನನಗನ್ನಿಸುತ್ತದೆ, ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಸುಮ್ಮನೆ ಒಂದು ರೀತಿ ಎಲ್ಲೋ ಕೂಗಿದ ಹಾಗೆ ಆಗುತ್ತದೆ. ನಿಜವಾಗಿಯೂ ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸಚಿವ ಸಂಪುಟದ ಮಂತ್ರಿಗಳು ಇರುತ್ತಾರೆ, ಅವರು ಬರೆದುಕೊಳ್ಳುತ್ತಾರೆ. ಮೊನ್ನೆ ಸಿಂಧ್ಯಾಜಿಯವರು ಇದ್ದರು, ಎರಡು ಮೂರು ವಾಕ್ಯಗಳನ್ನು ಬರೆದುಕೊಂಡಿರಬೇಕು. ಅವರು, ನನಗೆ ವಹಿಸಿಕೊಟ್ಟಿದ್ದಾರೆಂದು ಹೇಳಿದರು. ಆದರೆ, ಇವತ್ತು ಸ್ಟೇಟ್ ಮಿನಿಸ್ಟರೂ ಇಲ್ಲ, ಅವರೂ ಇಲ್ಲ. ನಾವು ಯಾರಿಗೆ ಹೇಳುವುದು? ಇರಿಗೇಷನ್‌ಗೆ ಸಂಬಂಧಪಟ್ಟಂತೆ, ಯಾರಾದರೂ ಒಬ್ಬರು ಬೇಕು. ಅದಕ್ಕೆ ಸುಮ್ಮನೆ ಅಡ್ಜರ್ನ್ ಮಾಡಿ, ಮತ್ತೆ ಎರಡೂವರೆ ಗಂಟೆಗೆ ಸೇರೋಣ.

(ಶ್ರೀ ಕೆ.ಎನ್.ನಾಗೇಗೌಡರು, ಸಭಾಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ವಾಟಾಳ್ ನಾಗರಾಜ್:- ಪ್ರಾಮಾಣಿಕವಾಗಿ ಒಂದು ಚಿಂತನೆ ಮಾಡೋಣ. ಕೃಷ್ಣಾ ಯೋಜನೆಯ ಬಗ್ಗೆ ಗಂಭೀರವಾದ ಚರ್ಚೆಯಾಗುವಾಗ ಮಾನ್ಯ ಮುಖ್ಯ ಮಂತ್ರಿಗಳು ಇರಬೇಕಾದ್ದು ಅವರ ಕರ್ತವ್ಯ. ಈ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅವರು ಇಲ್ಲದೇ ಚರ್ಚೆ ಮಾಡತಕ್ಕಂಥಾದ್ದು ಏನು ಪ್ರಯೋಜನವಾಗುತ್ತದೆ? ತಾವು ಪ್ರಾಮಾಣಿಕವಾಗಿ ಸಭೆಗೆ ಹೇಳಬೇಕು.

ಛೇರ್ಮನ್:- ತಾವು ಚರ್ಚೆ ಪ್ರಾರಂಭ ಮಾಡಿದರೆ ಸೀನಿಯರ್ ಮಿನಿಸ್ಟರು ಇದ್ದಾರೆ, ಅವರು ಎಲ್ಲವನ್ನೂ ನೋಟ್ ಮಾಡಿಕೊಳ್ಳುತ್ತಾರೆ, ಉತ್ತರ ಕೊಡಲು ಅನುಕೂಲವಾಗುತ್ತದೆ. ಆದ್ದರಿಂದ ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ವಾಟಾಳ್ ನಾಗರಾಜ್:- ಅವರುಗಳ ಬಗ್ಗೆ ನನಗೆ ಬಹಳ ಗೌರವ ಇದೆ. ಸೀನಿಯರ್ ಮಿನಿಸ್ಟರು ಇದ್ದಾರೆ, ಗುರುತು ಹಾಕಿಕೊಳ್ಳುತ್ತಾರೆ.

ಛೇರ್ಮನ್:- ಹಾಗಲ್ಲ, ಅವರು ಎಲ್ಲವನ್ನೂ ನೋಟ್ ಮಾಡಿಕೊಂಡಿರುತ್ತಾರೆ. ಈಗಾಗಲೇ ಪ್ರಾರಂಭವಾಗಿದೆ. ವಿರೋಧಪಕ್ಷದ ನಾಯಕರು ಮಾತನಾಡುವಾಗ, ಸಿದ್ಧರಾಮಯ್ಯನವರು ಗುರುತು ಹಾಕಿಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಇದು ಸರಿಯೇ ಎಂದು ನಾನು ಹೇಳುವುದು. ವಿರೋಧ ಪಕ್ಷದ ನಾಯಕರು ಬಿಡಿ, ಯಾರು ಇರಲಿ, ಇಲ್ಲದಿರಲಿ ನಾನು ಮಾತನಾಡುತ್ತೇನೆಂದು ಹೇಳುತ್ತಾರೆ. ಅದಲ್ಲ, ನಾನು ಖರ್ಗೆಯವರಿಗೆ ಹೇಳುತ್ತಿದ್ದೇನೆ. ಅವರು ಬಹಳ ಗುರುತರವಾಗಿ, ಮುಖ್ಯ ಮಂತ್ರಿಗಳ ಮೇಲೆಯೇ ಹೇಳಬೇಕಾಗಿದೆ. ಕೃಷ್ಣಾ ಬಗ್ಗೆ ಅನೇಕ ವಿಚಾರಗಳನ್ನು, ಅನೇಕ ಸಮಸ್ಯೆಗಳನ್ನು ಅವರ ಗಮನಕ್ಕೆ ತರಬೇಕಾಗಿದೆ. ಅವರು ಎದುರಿಗೆ ಇದ್ದರೆ, ಸ್ಪಂದಿಸುವುದಕ್ಕೆ, ಮಾತುಕತೆಗೆ ಬಹಳ ಚೆನ್ನಾಗಿರುತ್ತದೆಂದು ನನ್ನ ಭಾವನೆ. ಜೊತೆಗೆ, ಜವಾಬ್ದಾರಿ ಬರುತ್ತದೆ, ಶಕ್ತಿ ಬರುತ್ತದೆ.

ಛೇರ್ಮನ್:- ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ ತಾವು ಪ್ರಾರಂಭ ಮಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಸ್ಟೇಟ್ ಮಿನಿಸ್ಟರ್ ಇಲ್ಲ ಅವರನ್ನಾದರೂ ಕರೆಯಿಸಿ. ಅವರೂ ಇಲ್ಲ ಅಂದರೆ ಹೇಗೆ?

ಛೇರ್ಮನ್:- ಸ್ಟೇಟ್ ಮಿನಿಸ್ಟರ್‌ನ್ನು ಕರೆಯಿಸುತ್ತೇನೆ ತಾವು ಮಾತನಾಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರು ಬರಲಿ.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಮಾನ್ಯ ಸದಸ್ಯರು ಮಾತನಾಡಿದ ಪ್ರೊಸಿಡಿಂಗ್ಸನ್ನು ಮಾನ್ಯ ಮುಖ್ಯ ಮಂತ್ರಿಗಳ ಅವಗಾಹನೆಗೆ ತೆಗೆದುಕೊಂಡು ಹೋಗಿದ್ದಾರೆ. ಅದಕ್ಕೆ ಅವರು ಬಂದಾಗ ಪೂರ್ತಿ ಉತ್ತರ ಹೇಳುತ್ತಾರೆ. ತಾವು ಇವತ್ತು ಹೇಳುತ್ತಿರುವುದನ್ನು ಕೂಡ ನಾವು ಇಲ್ಲಿ ಬರವಣಿಗೆ ಮಾಡಿ, ಮಾನ್ಯ ಮುಖ್ಯ ಮಂತ್ರಿಗಳಿಗೆ ತಲುಪಿಸುತ್ತೇವೆ. ಆದರೊಳಗೆ ಪ್ರೊಸಿಡಿಂಗ್ಸ್ ಸಹ ರೆಡಿಯಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಸದನ ನಡೆಯುವಾಗ ಏನೋ ಒಂದು ಸಾರಿ ಬಹಳ ಮುಖ್ಯವಾದ ಕೆಲಸ ಇದೆ ಅಂದರೆ ಹೋಗಲಿ, ಸದನ ನಡೆಯುತ್ತಿದೆ ಅಂತ ಗೊತ್ತಿದ್ದರೂ ಸಹ ಹೋಗುವುದು ಸರಿಯಲ್ಲ, ಮತ್ತೆ ಸದನ ಏಕೆ ಕರೆಯಬೇಕು. ಕೊನೆಯ ದಿವಸ ಅವರು 11-00 ಗಂಟೆಗಾದರೂ ಬಂದಿದ್ದರೆ ಆಗಿತ್ತು. ಹಿಂದೆ ಆಗಿದೆ ಮುಂದೆ ಆಗಿದೆ ಅಂತ ಪ್ರತಿ ಸಲ ಇದೇ ರೀತಿ ಮಾಡುವುದು ಸರಿಯಲ್ಲ. ಮೊನ್ನೇ ರಾಜ್ಯಪಾಲರ ಭಾಷಣ ಮತ್ತು ಬಜೆಟ್ ಭಾಷಣ ಅನೇಕ ಸಲ ಅವರು ಗೈರು ಹಾಜರಿಯಲ್ಲಿಯೇ ನಡೆಯಿತು. ನಮ್ಮ ಕೃಷ್ಣಾ ಮೇಲ್ದಂಡೆ ಯೋಜನೆ ಮೇಲೆ ಮಾತನಾಡುವಾಗಲೂ ಸಹ ಅವರ ಗೈರು ಹಾಜರಿಯಲ್ಲಿಯೇ ನಡೆಯಿತು. ಎಲ್ಲವೂ ಕೂಡ ಅವರ ಗೈರು ಹಾಜರಿಯಲ್ಲಿಯೇ ಮಾಡಬೇಕು ಅಂದರೆ ಸಂಪ್ರದಾಯಗಳು ಇಲ್ಲವೇನು ಹಿಂದೆ

ಮಾಡಿಲ್ಲವೇನು ಇದನ್ನೇ ಹೇಳಿಕೊಂಡು ತಾವು ಕಾಲ ಕಳೆಯುವುದಾದರೆ, ಅದು ಅಷ್ಟು ಒಳ್ಳೆಯದು ಎಂದು ನನಗೆ ಅನ್ನಿಸುವುದಿಲ್ಲ.

ಶ್ರೀ ಆರ್.ಎಲ್.ಜಾಲಪ್ಪ:- ಮಾನ್ಯ ಅಧ್ಯಕ್ಷರೇ ಮೊದಲು ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ತೀರ್ಮಾನವಾದ ಪ್ರಕಾರ 8ನೇ ತಾರೀಖಿಗೆ ಮುಗಿಯಬೇಕಾಗಿತ್ತು. ಇವತ್ತು ಅವರು ಏನು ಕಾರ್ಯಕ್ರಮಕ್ಕೆ ಹೋಗಿದ್ದಾರೆ ಅದು ಮೊದಲೇ ಫಿಕ್ಸ್ ಆಗಿದ್ದ ಕಾರ್ಯಕ್ರಮ. ಕಾರಣಾಂತರಗಳಿಂದ 8ನೇ ತಾರೀಖಿಗೆ ಮುಗಿಸುವುದಕ್ಕೆ ಆಗಲಿಲ್ಲ. ಅಲ್ಲಿ ಅವರಿಗೆ ಭರವಸೆ ಕೊಟ್ಟಿದ್ದರಿಂದ ಹೋಗಲೇಬೇಕಾಯಿತು. ಈ ಸಭೆಗೆ ಅಗೌರವ ಮಾಡಬೇಕು ಎನ್ನುವಂತಹ ಉದ್ದೇಶ ಖಂಡಿತವಾಗಿ ಅವರಿಗೆ ಇಲ್ಲವೇ ಇಲ್ಲ. ಅದರಲ್ಲೂ 35 ವರ್ಷಗಳ ಕಾಲ ಅವರು ಈ ಸದನದಲ್ಲಿ ಇದ್ದು ಕೆಲಸ ಮಾಡಿದವರು. ಅಂತಹವರು ಮುಖ್ಯ ಮಂತ್ರಿ ಆಗಿ ಈ ಸದನಕ್ಕೆ ಅಗೌರವ ತರುತ್ತಾರೆ ಅಂದರೆ ಅದನ್ನು ಯಾರೂ ಕೂಡ ಯೋಚನೆ ಮಾಡಲು ಆಗುವುದಿಲ್ಲ. ದಯಮಾಡಿ ಸಹಕರಿಸಬೇಕು ಅಂತ ನಾನು ಖರ್ಗೆಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ಅಗೌರವ ಅಂತ ಅಲ್ಲ ಈ ಸದನ ನಡೆಯುವಾಗ ಯಾವುದೇ ಸಭೆ ಸಮಾರಂಭಗಳು ಇರಬಾರದು ಮಾನ್ಯ ಅಧಕ್ಷರೇ, ನಾನು ಅನೇಕ ಆಹ್ವಾನ ಪತ್ರಿಕೆ ಗಳನ್ನು ನೋಡಿದ್ದೆನೆ ಒಂದೊಂದು ಸಮಾರಂಭಕ್ಕೆ ಹತ್ತು ಹತ್ತು ಜನ ಮಂತ್ರಿಗಳು, ಏಕೆ ಏನು ಉದ್ದೇಶ ನನಗೆ ಅರ್ಥವಾಗುವುದಿಲ್ಲ ನಾನು ಆಹ್ವಾನ ಪತ್ರಿಕೆಗಳನ್ನು ತರಲಿಲ್ಲ ನನ್ನ ಹತ್ತಿರ ಒಂದು ಹತ್ತು ಇವೆ ಸಮಾರಂಭಗಳಿಗೆ ಮುಖ್ಯಮಂತ್ರಿಗಳು ಹೋದರೆ ಅವರ ಹಿಂದೆ ಬೋಗಿಗಳು ಒಂದು ಎರಡು ಮೂರು ಅಂತ ಹೇಳಿ 12 ಬೋಗಿಗಳು ಏಕೆ ಒಂದು ಸಮಾರಂಭಕ್ಕೆ ಒಬ್ಬರು ಇಬ್ಬರು ಮಂತ್ರಿಗಳು ಹೋದರೆ ಸಾಕು ಹತ್ತು ಹತ್ತು ಜನ ಮಂತ್ರಿಗಳು ಅಂದರೆ ಏನು ಹುಡುಗಾಟ ಇದು ಇದು ಸರಿಯಲ್ಲ.

ಶ್ರೀ ಆರ್ ಎಲ್ ಜಾಲಪ್ಪ:- ಮಾನ್ಯ ಅಧ್ಯಕ್ಷರೇ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಹತ್ತಿರ ಮಾತನಾಡಿದ್ದಾರೆ ಯಾವುದೇ ಒಂದು ಸಮಾರಂಭಗಳಿಗೆ ಅಲ್ಲಿನ ಮಂತ್ರಿ ಮತ್ತು ಸಂಬಂಧಪಟ್ಟ ಇಲಾಖಾ ಮಂತ್ರಿ ನಾನು ಮೂರು ಜನ ಮಾತ್ರ ಇರಬೇಕು ಜೊತೆಗೆ 20-30 ಕಾರು ನನ್ನ ಜೊತೆ ಬರುವುದು ಅನಾವಶ್ಯಕ ಜೊತೆಗೆ ಒಂದು ವ್ಯಾನ್ ತೆಗದುಕೊಂಡು ಆ ವ್ಯಾನ್‌ನಲ್ಲಿ ಎಲ್ಲರೂ ಬರಬೇಕು ಅಂತ ಸೂಚನೆ ಕೊಟ್ಟಿದ್ದಾರೆ ಆ ವ್ಯಾನ್ ಕೂಡ ಇನ್ನು 15-20 ದಿವಸದಲ್ಲಿ ತಯಾರು ಮಾಡಿ ಇನ್ನು ಮೇಲೆ ಈ ಬೋಗಿಗಳು 20-30 ಕಾರುಗಳು ಹೋಗುತ್ತಿದ್ದವಲ್ಲ ಅದನ್ನು ನಿಲ್ಲಿಸಬೇಕು ಅಂತ ತೀರ್ಮಾನ ತೆಗೆದುಕೊಂಡಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧಕ್ಷರೇ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೆನೇ ಅಂದರೆ ಯಾವುದೇ ಒಂದು ವಿಷಯವನ್ನು ನಾವು ಸೀರಿಯಸ್ ಆಗಿ ತೆಗೆದುಕೊಂಡು ಚರ್ಚೆ ಮಾಡಬೇಕೆನ್ನುವ ದೃಷ್ಟಿಯಿಂದಲೇ ಈ ಸಬೆಯಲ್ಲಿ ತೆಗೆದುಕೊಳ್ಳತಕ್ಕಂಥಾದ್ದು ಈಗ 10-11ನೇ ತಾರೀಖು ನಮ್ಮದು ಕಾನ್ಫರೆನ್ಸ್ ಇತ್ತು ನಾನು ಡಲ್ಲಿಗೆ ಹೋಗಬೇಕಾಗಿತ್ತು ಇವತ್ತು ಅಲ್ಲಿಇರಬೇಕಾಗಿತ್ತು ನನಗೆ ಲೆಟರ್ ಬಂದಿತ್ತು ಟೆಲಿಫೋನ್ ಮುಖಾಂತರ ಪ್ರಧಾನ ಮಂತ್ರಿಗಳು ಕೆಲವು ಕನ್‌ಸಲ್ಟೇಶನ್ಸ್ ಮಾಡುತ್ತೇನೆ ಎಂದು ಹೇಳಿ ಎಲ್ಲಾ ಸಿ ಎಲ್‌ಪಿ ಲೀಡರ್ಸ್‌ಗೆ ಮತ್ತು ಪಿಸಿಸಿ

ಅಧಕ್ಷರಿಗೆ ಇವತ್ತು ಸಾಯಂಕಾಲ ಟೈಮ್ ಕೊಟ್ಟಿದ್ದರು ಅದರೂ ಕೂಡ ನಾನು ಅದು ಬಿಟ್ಟು ಇದಕ್ಕೆ ಏಕೆ ಮಹತ್ವಕೊಟ್ಟಿದ್ದೇವೆ ಅಂದರೆ ಸದನ ದಲ್ಲಿ ನಾವೇ ಇರಲಿಲ್ಲ ಅಂದರೆ ಚೆನ್ನಾಗಿ ಕಾಣುವುದಿಲ್ಲ ಈ ಅಪ್ಪರ್ ಕೃಷ್ಣಾ ಬಗ್ಗೆ ನಾನು ಮಾತನಾಡಿ ಇನ್ನು ಅರ್ಧ ನಾವು ಹೇಳದೇ ಡೆಲ್ಲಿಗೆ ಹೋದೆ ಅಂದರೆ ಸರಿಯೇ?

ಛೇರ್ಮನ್:- 2-10 ನಿಮಿಷಕ್ಕೆ ಮುಖ್ಯಮಂತ್ರಿಗಳು ಬರುತ್ತಾರೆ ಅವರು ಬಂದ ತಕ್ಷಣ ನೇರ ವಾಗಿ ಇಲ್ಲಿಗೆ ಬರುವುದಕ್ಕೆ ಹೇಳೋಣ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧಕ್ಷರೇ ನಾನು ಹೇಳುವುದು ಈ ಸದನ ಬಹಳ ಮುಖ್ಯ ಇದಕ್ಕೆ ಪ್ರಾಮುಖ್ಯತೆ ಕೊಡಬೇಕು ಇಲ್ಲಿ ನಡೆಯವ ಕಾರ್ಯಕ್ರಮಗಳಿಗೆ ಮೊದಲ ಆದ್ಯತೆ ಕೊಟ್ಟು ಉಳಿದಂತಹ ನಿಮ್ಮ ಸಾರ್ವಜನಿಕ ಕಾರ್ಯಕ್ರಮಗಳಿಗೆ ಹೋಗಬೇಕು.

ಛೇರ್ಮನ್:- ಒಪ್ಪಿಕೊಳ್ಳಬಹುದು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ:- ಇಲ್ಲದಿದ್ದರೆ ಈ ಸದನ ಮುಖ್ಯವೋ ಅಥವಾ ಸಮಾರಂಭ ಮುಖ್ಯವೊ ? ಇದಕ್ಕೂ ಅದಕ್ಕೂ ವ್ಯತ್ಯಾಸ ಇಲ್ಲವೇ? ತಾವು ಅದನ್ನೇ ಹೇಳಿಕೊಳ್ಳುತ್ತಾ ಹೋದರೆ ಹೇಗೆ? ಅದಕ್ಕೆ ದಯವಿಟ್ಟು ಇನ್ನು ಮುಂದೆ ಈ ರೀತಿಯಾಗಿ ಮಾಡುವುದು ಸರಿಯಲ್ಲ ಇನ್ನು ಮುಂದೆ ಬರುವ ಕಾರ್ಯಕ್ರಮಗಳನ್ನು ತಾವು ಬಂದ ಮೇಲೆ ಹೇಳಿ ಮಾನ್ಯ ಅಧಕ್ಷರೇ ಕೆಲವು ವಿಷಯಗಳನ್ನು ನಾನು ಈಗಾಗಲೇ ಪ್ರಸಾಪ್ತ ಮಾಡಿದ್ದೇನೆ. ಈಗ ವಿಶೇಷವಾಗಿ ಕೃಷ್ಣಾ ಬೇಸಿನ್‌ನಲ್ಲಿರತಕ್ಕಂಥ ಎಲ್ಲಾ ಪ್ರಾಜೆಕ್ಟ್‌ಗಳನ್ನು ಇವತ್ತು ಯಾವ ಗತಿಯಲ್ಲಿ ನಡೆಸಬೇಕಾಗಿತ್ತೋ ಆ ಗತಿಯಲ್ಲಿ ನಡೆಸಿಲ್ಲ ಅದಕ್ಕೆ ಯಾವ ರೀತಿಯಲ್ಲಿ ಚಾಲನೆ ಕೊಡಬೇಕಾಗಿತ್ತೋ ಆರೀತಿಯಾದ ಚಾಲನೆ ಕೊಟ್ಟಿಲ್ಲ ಎನ್ನತಕ್ಕಂಥ ನಮ್ಮ ಅಪಾಧನೆ ಏನು ಇದೆ ಅದನ್ನು ನಾವು ಪುಷ್ಟೀಕರಿಸುತ್ತಾ ಕೆಲವು ವಿಷಯಗಳನ್ನು ನಾನು ತಮ್ಮ ಮುಂದೆ ಇಡುತ್ತೇನೆ ಮಾತು ಬಂದರೆ ಪದೇ ಪದೇ ಇದು20 ವರ್ಷಗಳ ಪ್ರಾಜೆಕ್ಟ್, ಇದು ಹಿಂದೆ ಆಗಲಿಲ್ಲ ಈಗಲೇ ಆಗಬೇಕು ಅಂದರೆ ಹೇಗೆ? ಅಂದರೆ ಅದು ಉತ್ತರ ಅಲ್ಲ ಇದಕ್ಕೆ ತಮಗೆಗೊತ್ತಿದ್ದಹಾಗೆಅಪ್ಪರ್‌ಕೃಷ್ಣಾ ಪ್ರಾಜೆಕ್ಟ್ ಶುರು ಆಗಿದ್ದುದು ಈಗಲ್ಲ ಇದು ಹೈದ್ರಾಬಾದ್ ಸ್ಟೇಟ್‌ನಲ್ಲಿ ಸರ್ವೆ ಆಗಿದ್ದು, ಮತ್ತು ಈಘಟಪ್ರಭಾ ಮಲಪ್ರಭಾ ಇವೆಲ್ಲಾ ಬಾಂಬೆ ಪ್ರೆಸಿಡೆನ್ಸಿಯಲ್ಲಿ ಪ್ರಾರಂಭವಾಗಿದ್ದುವು ಆದರೆ ಇದಕ್ಕೆ ಚಾಲನೆ ಹೆಚ್ಚಾಗಿ ಬಂದಿದ್ದು 1971 ಆದ ಮೇಲೆ 1971ರಿಂದ ಕೆಲವು ಕಾಯಕ್ರಮಗಳನ್ನು ಹಾಕಿಕೊಂಡು ಬಂದಿದ್ದೇವೆ ಎಷ್ಟು ಸಾಧ್ಯತೆ ಇದೆ ಅಷ್ಟು ನಾವು ಮಾಡುತ್ತೇವೆ ಅಂತ ಹೇಳಿ ಹಿಂದಿನ ಸರ್ಕಾರಗಳು ಹೇಳಿಕೊಳ್ಳುತ್ತಾ ಬಂದಿವೆ ಮತ್ತು ಅದರಲ್ಲಿ 20-30 ಪರ್ಸೆಂಟ್ ಹೆಚ್ಚುಕಡಿಮೆ ಆಗಿರಬಹುದು ಅದು ಇವತ್ತಿನ ದಿವಸ ಎರಡು ಸಾವಿರ ಇಸವಿ ಯೊಳಗೆ ನಮಗೆ ಅಲಾಟ್ ಆದಂತಹ 734 ಟಿ ಎಂ ಸಿ ನೀರಿನಲ್ಲಿ 5 ಟಿ ಎಂ ಸಿ ನೀರನ್ನು ಕುಡಿಯುವ ಸಲುವಾಗಿ ಮದ್ರಾಸ್‌ಗೆ ಕೊಡುತ್ತೇವೆಂದು ಒಪ್ಪಿಕೊಂಡಿದ್ದೇವೆ ಅದು ಬಿಟ್ಟರೆ 729 ಟಿ ಎಂ ಸಿ ನೀರನ್ನು (ಎ) ಸ್ಕೀಮ್‌ನಲ್ಲಿ ಬಚಾವತ್ ಅವಾರ್ಡ್ ಪ್ರಕಾರ ನಮಗೇನು ಅಲಾಟ್‌ಮೆಂಟ್ ಆಗಿದೆ ಅದನ್ನು ನಾನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳುತ್ತೇನೆ. ಎನ್ನತಕ್ಕಂಥ ಅದಕ್ಕಾಗಿ ಪ್ರಾವಿಜನ್ ನಾನು ಪ್ರತಿ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಮಾಡಿದ್ದೆನೇ ಎನ್ನತಕ್ಕಂಥ ಮಾತನ್ನು ಅವರು ಪದೇ ಪದೇ ಹೇಳಿ ಅದಕ್ಕೆ ಅವರು ಒಂದು ಕಾರ್ಯಕ್ರಮವನ್ನು ಕೂಡ ಹಾಕಿಕೊಂಡಿದ್ದೇವೆ ಅಂತ ಹೇಳಿ ಈ

ಜಲನಿಗಮದಿಂದ 800 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡುತ್ತೇನೆ ಆದರಲ್ಲಿ 200 ಕೋಟಿ ರೂಪಾಯಿಗಳನ್ನು ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗಾಗಿ ಬಜೆಟರಿ ಪ್ರಾವಿಜನ್ ಮಾಡಿದ್ದೇನೆ. ಹೀಗೆ ಸಾವಿರ ಕೋಟಿ ರೂಪಾಯಿ ಕೇವಲ ಅಪ್ಪರ್ ಕೃಷ್ಣಾಗೋಸ್ಕರ ಘಟಪ್ರಭಾ ಮಲಪ್ರಭಾ, ಇನ್ನು ಉಳಿದಂತಹ ಮಿಡಿಯಂ ಇರಿಗೇಶನ್ಸ್ ಏನು ಇದೆ ಅದಕ್ಕೆ ಅದು ಇಪ್ಪರಗಿ ಬ್ಯಾರೇಜ್ ಇರಬಹುದು ಅಥವಾ ಮುಳವಾಡ ಲಿಫ್ಟ್ ಇರಿಗೇಶನ್ಸ್ ಇರಬಹುದು ಆಲ್ಮಟ್ಟಿಲಿಫ್ಟ್ ಇರಿಗೇಶನ್ ಇರಬಹುದು ಅಥವಾ ಕಾರಂಜಾ ಪ್ರಾಜೆಕ್ಟ್ ಇರಬಹುದು ಮಿಡಿಯಂ ಇರಿಗೇಶನ್ ಪ್ರಾಜೆಕ್ಟ್‌ಗಳು ಬಿಟ್ಟು ಎಕ್ಸಕ್ಲೂಸಿವ್‌ಲಿ ಅದಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ನಾನು ಖರ್ಚು ಮಾಡುತ್ತೇನೆ ಅಂತ ಹೇಳಿ ಒಂದು ಸಲ ಅಲ್ಲ ಹತ್ತಾರು ಸಲ ಅವರು ಹೇಳಿದ್ದಾರೆ ಹಿಂದೆ ಸರ್ಕಾರ ಒಂದು ಕಾರ್ಯಕ್ರಮ ಹಾಕಿಕೊಂಡಿತ್ತು ಮತ್ತು ಡಾಕ್ಯುಮೆಂಟನ್ನು ನೀವೇ ತಯಾರು ಮಾಡಿದ್ದು, ಸರ್ಕಾರ ತಯಾರು ಮಾಡಿರತಕ್ಕಂಥದ್ದು ಮತ್ತು ಅದನ್ನು ಪುಷ್ಟಿಕರಿಸುವಂತಹ ರೀತಿಯಲ್ಲಿ ಇದನ್ನು ಕ್ರೇಂದ್ರ ಸರ್ಕಾರದ ಮುಂದೆ ಕೂಡ ತಾವು ಪ್ರತಿಪಾದನೆ ಮಾಡಿದ್ದೀರಿ ಅದರಲ್ಲಿ ಏನು ಹೇಳಿದ್ದೀರಿ ಅಂದರೆ ಪ್ರತಿವರ್ಷ ನಾವು ಯಾವ ರೀತಿಯಲ್ಲಿ ಬಜೆಟ್‌ನಲ್ಲಿ ಹಣ ಪ್ರಾವೈಡ್ ಮಾಡುತ್ತೇವೆ ಎನ್ನುವುದಕ್ಕೆ ತಾವು ಒಂದು ಅಂಕಿಸಂಖ್ಯೆಯನ್ನು ಕೊಟ್ಟಿದ್ದೀರಿ ಹಿಂದೆ ಈ ಒಂದು ಡಾಕ್ಯುಮೆಂಟ್ ಪ್ರಕಾರ ಇಲಾಖೆಯು ಕೃಷ್ಣಾ ಕಣಿವೆ ಯೋಜನೆಗಳಿಗೆ ಈ ಕೆಳಗಿನಂತೆ ವರ್ಷಾವಾರು ಪ್ರಕಾರ ಹಣವನ್ನು ಒದಗಿಸಬೇಕಾಗಿದೆ ಅದಕ್ಕೆ ಬಜೆಟರಿ ಪ್ರಾವಿಜನೆ ಎಷ್ಟು ಇಡುತ್ತೆವೆ ಅಂದರೆ 1995-96ರಲ್ಲಿ 550 ಕೋಟಿ ರೂಪಾಯಿ, 96-97ರಲ್ಲಿ 600 ಕೋಟಿ 97-98ರಲ್ಲಿ 650 ಕೋಟಿ, 98-99ರಲ್ಲಿ 700 ಕೋಟಿ, 99-2000ಕ್ಕೆ ಅಂದರೆ ಎರಡು ಸಾವಿರ ವರ್ಷದಲ್ಲಿ ಮುಗಿಸುತ್ತೇವೆ ಎಂದು ಹೇಳಿ 750 ಕೋಟಿ ರೂಪಾಯಿಗಳನ್ನು ಬಜೆಟರಿ ಪ್ರಾವಿಜನ್ ಮಾಡುತ್ತೇವೆ ಎನ್ನತಕ್ಕಂಥ ಒಂದು ಡಾಕ್ಯುಮೆಂಟ್‌ನ್ನು ತಯಾರು ಮಾಡಿ, ಇದನ್ನು ನಾವು ಒಪ್ಪಿಕೊಂಡು ಇಲಾಖೆಯವರಿಗೆ ಹೇಳಿ ಒದಗಿಸಿಕೊಟ್ಟಿರುವಂಥಾದ್ದು. ಆದರೆ, 1995-96ರಲ್ಲಿ ಒಟ್ಟು 555 ಕೋಟಿ ರೂಪಾಯಿ ಇಡಬೇಕಾಗಿತ್ತು, ಅದರಲ್ಲಿ 200 ಕೋಟಿ ರೂಪಾಯಿ ಇಡಲಾಗಿದೆ ಈ ವರ್ಷ 600 ಕೋಟಿ ರೂಪಾಯಿ ಬಡ್ಜೆಟರಿ ಪ್ರಾವಿಷನ್ ಇಡಬೇಕಾಗಿತ್ತು, ಆದರಲ್ಲಿ 250 ಕೋಟಿ ರೂಪಾಯಿ ಮಾತ್ರ ಇಡಲಾಗಿದೆ ಅದೇ ರೀತಿ ನೀರಾವರಿ ಬಾಂಡ್‌ಗಳ ಮೂಲಕ 1995-96ರಲ್ಲಿ 250 ಕೋಟಿ ರೂಪಾಯಿಗಳು, 1996-97ರಲ್ಲಿ 400 ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ ಮೊದಲು ಬಡ್ಜೆಟರಿ ಪ್ರಾವಿಷನ್ ಜಾಸ್ತಿ ಮಾಡಲಾಗುತ್ತಿತ್ತು ಈಗ ತಿರುಗಾಮರಗ ಆಗಿದೆ, ಬಡ್ಜೆಟರಿ ಪ್ರಾವಿಷನ್ ಕಡಿಮೆ, ನಿಗಮದಿಂದ ಅಪೇಕ್ಷೆ ಮಾಡತಕ್ಕಂಥ ಹಣ ಜಾಸ್ತಿ ಅಂದರೆ, ನಿಗಮಕ್ಕೆ ಹಣ ಬಂತು ಎಂದರೆ ಬಂತು, ಇಲ್ಲವೆಂದರೆ ಇಲ್ಲ ಈ ರೀತಿ ನಾವು ಬಡ್ಜೆಟ್‌ನಲ್ಲಿ ಬೇರೆ ರೀತಿಯಲ್ಲಿ ರೂಪಿಸತಕ್ಕಂಥಾದ್ದು ಎಷ್ಟರಮಟ್ಟಿಗೆ ಸಾಧ್ಯ?

ಶ್ರೀ ಡಿ ಆರ್ ಪಾಟೀಲ್: ಮಾನ್ಯ ಅಧ್ಯಕ್ಷರೇ, ಕಾವೇರಿ ಬೇಸಿನ್‌ಗೆ ಕೃಷ್ಣಾ ಬೇಸಿನ್‌ಗಿಂತ ಹೆಚ್ಚು ಬಡ್ಜೆಟರಿ ಪ್ರಾವಿಷನ್ ಮಾಡಲಾಗಿದೆ ಬೇರೆ ಬೇರೆ ವಾಟರ್ ಏರಿಯಾಗೆ ಬೇರೆ ಬೇರೆ ರೀತಿಯಲ್ಲಿ ವಾಟರ್ ರೇಟ್ ಫಿಕ್ಸ್ ಮಾಡಲಿಕ್ಕೆ ಒಂದು ಸಮಿತಿ ಯನ್ನು ರಚಿಸಲಾಗಿದೆ ಕೃಷ್ಣಾ ಪ್ರಾಜೆಕ್ಟ್‌ಗೆ ಕೊಡುವ ಹಣವೆಲ್ಲಾ ಸಾಲದ ಹಣ, ಕಾವೇರಿ ಬೇಸಿನ್‌ಗೆ ಕೊಡುವ ಹಣ ಎಲ್ಲಾ ಬಡ್ಜೆಟರಿ ಪ್ರಾವಿಷನ್ ಹಣ ಅವರಿಗೇ ಒಂದು ರೇಟ್, ನಮಗೇ ಒಂದು ವಾಟರ್ ರೇಟ್ ಆಗಬಾರದು ಕುಡಿಯುವ ನೀರಿಗಾಗಲೀ,

ರಾಜ್ಯಾದ್ಯಂತ ಒಂದೇ ರೀತಿಯ ರೇಟ್ ಇರಬೇಕು ಎನ್ನುವುದರ ಬಗ್ಗೆ ಸರ್ಕಾರದ ಬದ್ಧತೆಯನ್ನು ಉತ್ತರ ಕೊಡುವಾಗ ಹೇಳಬೇಕು ಇಲ್ಲವೆಂದರೆ, ಉತ್ತರ ಕರ್ನಾಟಕದ ಜನತೆಗೆ ಅನ್ಯಾಯ ಮಾಡಿದ ಹಾಗಾಗುತ್ತದೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ:- ಸಿ ಎಂ ಅವರು ಉತ್ತರ ಕೊಟ್ಟ ಮೇಲೆ ಕ್ಲಾರಿಫಿಕೇಷನ್ ಮೂಲಕ ತಾವು ಈ ಪ್ರಶ್ನೆಯನ್ನು ಕೇಳಿ ಉತ್ತರ ಪಡೆಯಬಹುದು ಕೃಷ್ಣಾ ಬೇಸಿನ್‌ನಿಂದ 729 ಟಿ ಎಂ ಸಿ ಎಫ್ ಟಿ ಯಷ್ಟು ನೀರನ್ನು ನಾವು ಉಪಯೋಗ ಮಾಡಿಕೊಳ್ಳುವುದಕ್ಕೆ ಕನಿಷ್ಟ 9 ಸಾವಿರ ಕೋಟಿ ರೂಪಾಯಿಗಳುಬೇಕು ಇನ್ನು ಉಳಿದ 4 ವರ್ಷಗಳಲ್ಲಿ 9 ಸಾವಿರ ಕೋಟಿ ರೂಪಾಯಿಗಳನ್ನು ಸಂಗ್ರಹಣೆ ಮಾಡಿ ಖರ್ಚು ಮಾಡಿದಿದ್ದರೆ, ಯಾವ-ರೀತಿ ಕಾವೇರಿ ಬೇಸಿನ್‌ನಲ್ಲಿ ಒಂದು ಹೋರಾಟ ಪ್ರಾರಂಭವಾಗಿದೆಯೋ? ತಮಿಳುನಾಡಿನವರು ಕಾವೇರಿಯಿಂದ ನೀರನ್ನು ಬಿಡಿ ಎಂದು ಏನು ತಕರಾರು ಮಾಡಿಕೊಂಡು ಕುಳಿತಿದ್ದಾರೋ ಅದೇ ಪರಿಸ್ಥಿತಿ ಕೃಷ್ಣಾ ಬೇಸಿನ್‌ನಲ್ಲೂ ಬರುತ್ತದೆ ಆ ಮೇಲೆ, ಆಲಮಟ್ಟಿ ಡ್ಯಾವರೆನ ಎತ್ತರವನ್ನು 524 ಮಿಾಟರ್‌ವರೆಗೆ ಎತ್ತರಿಸಿ ಸಂಪೂರ್ಣವಾಗಿ ನೀರನ್ನು ನಿಲ್ಲಿಸುತ್ತೇನೆ, ಬಾಗಲಕೋಟೆ ಹೊಸ ಪಟ್ಟಣವನ್ನು ಕಟ್ಟಿ ರೀಹೆಬಿಲಿಟೇಷನ್ ಪ್ರೋಗ್ರಾಮ್‌ನ್ನು ಸಂಪೂರ್ಣವಾಗಿ ಮಾಡಿಕೊಡುತ್ತೇವೆ, ಅದಕ್ಕೆ ಬೇಕಾದ ನೂರಾರು ಕೋಟಿ ರೂಪಾಯಿಗಳನ್ನು ನಾವು ಒದಗಿಸುತ್ತೇವೆನ್ನುವ ಮಾತನ್ನು ಮುಖ್ಯ-ಮಂತ್ರಿಗಳು ಹೇಳಿದ್ದಾರೆ ಮತ್ತು ಇದರ ಬಗ್ಗೆ ಬಜೆಟ್ ಭಾಷಣದಲ್ಲೂ ಪ್ರತಿಪಾದನೆ ಮಾಡಿದ್ದಾರೆ ಸರ್ಕಾರ ಹೇಳಿರುವ ಪ್ರಕಾರ ಎರಡು ಸಾವಿರ ಇಸವಿಯೊಳಗೆ ಈ ಯೋಜನೆಯನ್ನು ಮುಗಿಸಬೇಕಾದರೆ, ಬಡ್ಜೆಟರಿ ಪ್ರಾವಿಷನ್‌ನಿಂದ ಮತ್ತು ವರ್ಲ್ಡ್ ಬ್ಯಾಂಕ್‌ನಿಂದ ತೆಗೆದುಕೊಂಡ ಹಣವನ್ನು ಖರ್ಚು ಮಾಡಿದರೆ ಮಾತ್ರ ನೀವು ಆ ಗುರಿ ಯನ್ನು ಸಾಧಿಸುವುದಕ್ಕೆ ಸರ್ಕಾರ ಮಾಡಿದ್ದೇನೆಂದರೆ, ನಾನು ಈಗಾಗಲೇ ಹೇಳಿದ ಹಾಗೆ ಬಡ್ಜೆಟರಿ ಪ್ರಾವಿಷನ್ ಕಡಿಮೆ, ನಿಗಮ ಮತ್ತು ಬೇರೆ ಬೇರೆ ರೈತರುಗಳಿಂದ ಅಪೇಕ್ಷೆ ಮಾಡತಕ್ಕಂಥಾದ್ದು ಜಾಸ್ತಿ ಒಂದು ವೇಳೆ ಆ ಗುರಿಯಲ್ಲಿ ಸರ್ಕಾರ ವಿಫಲವಾದರೆ ಖಂಡಿತವಾಗಿ ಈ ಪ್ರಾಜೆಕ್ಟ್ ಬರುವುದಿಲ್ಲ ಅದು ಕೇವಲ ನಮಗೆ ಬೊಂಬಾಯಿ ನೋಡು ಎಂದು ತಮಾಷೆ ತೋರಿಸಿದ ಹಾಗೆ ಆಗುತ್ತದೆ ಯೇ ಹೊರತು ಬೇರೆ ಏನೂ ಆಗುವುದಿಲ್ಲ ಅದಕ್ಕೆ ಹಣವನ್ನು ಯಾವ ರೀತಿ ಸಂಗ್ರಹ ಮಾಡಬೇಕು? ತಾವು ಹಿಂದೆ ಎಂದು ಹೇಳಿದ್ದೀರಿ ಈಗಾಗಲೇ ಸರ್ಕಾರ ಬಂದು 15 ತಿಂಗಳು ಆಗುತ್ತಾ ಬಂತು ಏಕೆಂದರೆ, ನೀರಾವರಿ ಬಗ್ಗೆ ಮುಖ್ಯ ಮಂತ್ರಿಗಳು ಅಥಾರಿಟಿಟೀವ್ ಆಗಿ ಮಾತಾನಾಡುತ್ತಿದ್ದರು ಜನತಾ ದಳ ಎನ್ನುವುದಕ್ಕಿಂತಲೂ ಒಬ್ಬ ವ್ಯಕ್ತಿಯಾಗಿ, ಒಬ್ಬ ಮುಖ್ಯ ಮಂತ್ರಿಯಾಗಿ ನೀರಾವರಿ ಬಗ್ಗೆ ಆಸಕ್ತಿಯನ್ನು ಇಟ್ಟುಕೊಂಡು ನಾವು ಕೆಲಸ ಮಾಡುತ್ತೇವೆಂದು ಹೇಳಿಕೊಂಡು ಬಂದಂಥ ವ್ಯಕ್ತಿ ಎಷ್ಟರ ಮಟ್ಟಿಗೆ ಸಾಧನೆ ಮಾಡುವುದಕ್ಕೆ ಏನು ಗುರಿ ಇಟ್ಟುಕೊಂಡಿದ್ದಾರೆ ಎನ್ನುವುದು ಮುಖ್ಯ ಈ ಯೋಜನೆಗಳು ಕೇವಲ ಮಾತಿನಿಂದ ಆಗತಕ್ಕಂಥಾದ್ದಲ್ಲ ಇದಕ್ಕೆ ಹಣ ಬೇಕು ಹಣದ ಜೊತೆಗೆ ಅಲ್ಲಿಗೆ ಸ್ಟಾಫ್ ಬೇಕು ಈ ಎಲ್ಲಾ ನ್ಯೂನತೆಗಳನ್ನು ಸರಿಪಡಿಸುವ ಬಗ್ಗೆ ಮುಖ್ಯ-ಮಂತ್ರಿಗಳು ಪ್ರಯತ್ನಪಟ್ಟಿಲ್ಲ ಈ 15 ತಿಂಗಳಲ್ಲಿ ಮಾನ್ಯ ಮುಖ್ಯ-ಮಂತ್ರಿಗಳು 5 ಸಲ ಗುಲ್ಬರ್ಗಾ ಜಿಲ್ಲೆಗೆ ಭೇಟಿ ನೀಡಿದ್ದಾರೆ ಬಿಜಾಪುರ ಮತ್ತು ಆಲಮಟ್ಟಿಗೆ ಸುಮಾರು 10 ಸಲ ಹೋಗಿರಬಹುದು. ಹತ್ತು ಸಲ ಅಲ್ಲಿಗೆ ಭೇಟಿಕೊಟ್ಟಿದ್ದರೂ ಕೃಷ್ಣಾಬೇಸಿನ್‌ಪ್ರಾಜೆಕ್ಟ್‌ನಲ್ಲಿರತಕ್ಕಂಥ ದ್ದಾಗಲೀ, ಆ ಸಮಸ್ಯೆಗಳನ್ನು ಗುರುತಿಸಿ ಪರಿಹಾರ

ಮಾಡತಕ್ಕಂಥದ್ದರ ಬಗ್ಗೆ ಯಾವ ಚಿಂತನೆಯನ್ನು ಮಾಡಿಲ್ಲ ಒಂದು ಸಾರಿ ಹೋಗಿ ಮುಸ್ಲಿಮರ್ ಕಾನ್‌ಫೆರೆನ್ಸ್ ಮಾಡಿಕೊಂಡು ಗುಲ್ಬರ್ಗಾದಿಂದ ಬಂದರು, ಇನ್ನೊಂದು ಸಾರಿ ತುಮಕೂರಿನ ಮಠದಲ್ಲಿ ಲಕ್ಷ ದೀಪೋತ್ಸವದಲ್ಲಿ ಸತ್ಕಾರ ಸಮಾರಂಭ ಮಾಡಿಕೊಂಡು ವಾಪಸ್ ಬಂದರು, ಮತ್ತೆ ಈಗ ಲಮಾಣಿ ಕಾನ್‌ಫರೆನ್ಸ್ ಇದೆಯೆಂದು ಅಲ್ಲಿಗೆ ಹೋಗಿ ಮತ್ತೆ ವಾಪಸ್ ಬರುತ್ತಿದ್ದಾರೆ ಒಂದು ಸಾರಿ ಚುನಾವಣೆ ಸಂದರ್ಭದಲ್ಲಿ ಮಾತ್ರ ಭೀಮರಾಯನ ಗುಡಿಯಲ್ಲಿ ಸುತ್ತಾಡಿ ಆ ಕೆಲಸವನ್ನು ಬೇಗ ಮುಗಿಸುತ್ತೇವೆನ್ನುವ ಮಾತನ್ನು ಹೇಳಿದ್ದರು ಯಾವುದಕ್ಕೂ ಸೀರಿಯಸ್‌ನೆಸ್ ಇಲ್ಲ ಮುಖ್ಯ-ಮಂತ್ರಿಗಳು ಗುಲ್ಬರ್ಗಾ ಜಿಲ್ಲೆಗೆ ಭೇಟಿ ನೀಡಿದ್ದಾಗ ಕಾರಂಜ ಪ್ರಾಜೆಕ್ಟ್ ರಿವ್ಯೂ ಮಾಡಲಾಗಿದೆಯೇ? ಅಮರ್ಜಾ ಪ್ರಾಜೆಕ್ಟ್ ಬಗ್ಗೆ ರಿವ್ಯೂ ಮಾಡಲಾಗಿದೆ ಯೇ? ಚಿತಾಪುರ ತಾಲ್ಲೂಕಿನಲ್ಲಿರುವ ಬೆಣ್ಣೆತುರ ಪ್ರಾಜೆಕ್ಟ್ ಬಗ್ಗೆ ರಿವ್ಯೂ ಮಾಡಲಾಗಿದೆಯೇ? ಯಾವ ಪ್ರಾಜೆಕ್ಟ್‌ಗಳನ್ನು ಸಮಯಕ್ಕೆ ಸರಿಯಾಗಿ ಮುಗಿಸಲು ಕ್ರಮ ತೆಗೆದು ಕೊಳ್ಳಲಾಗಿದೆ? ಬಡ್ಜೆಟರಿ ಪ್ರಾವಿಷನ್ ಕಡಿಮೆ ಮಾಡಿದೊಡ್ಡ ಮಾತುಗಳನ್ನು ಮಾತ್ರ ಹೇಳಿಕೊಂಡು ಬರಲಾಗುತ್ತಿದೆ ನೀರಾವರಿ ವಿಷಯದಲ್ಲಿ ಸಂಪೂರ್ಣವಾಗಿ ನಿರ್ಲಕ್ಷ ಮಾಡಲಾಗಿದೆಯೆಂಬ ಮಾತನ್ನು ಈ ಸಂಧರ್ಭದಲ್ಲಿ ಹೇಳುತ್ತೇನೆ ಇನ್ನೊಂದು ವಿಷಯವೇನೆಂದರೆ, ಹಿಂದಿನ ಸರ್ಕಾರ ಇಲ್ಲಿಯವರೆಗೆ ಖರ್ಚು ಮಾಡಿದ್ದುದು ಸುಮಾರು 3 ಸಾವಿರ ಕೋಟಿ ರೂಪಾಯಿಗಳಾಗಿದ್ದರೆ ನಾವು ಒಂದೇ ವರ್ಷದಲ್ಲಿ 450 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಲಾಗಿದೆ ಆದರೆ, ಇಲ್ಲಿಯವರೆಗೆ ಒಂದು ಹಂತ ಅಂತೂ ಮುಗಿದಿದೆ . ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್ ಮುಗಿದಿದೆ ಆದರೆ ಉಳಿದಿಂಥ ಪ್ರಾಜೆಕ್ಟ್ ಮುಗಿಸಲಿಕ್ಕೆ ನೀವು ಹಾಕಿಕೊಂಡಂಥ ಗುರಿಯನ್ನು ನಾನು ಕೇಳುತ್ತಾ ಇದ್ದೇನೆ ನೀವು ಆಗುವುದಿಲ್ಲವೆಂದರೆ ನಾವು ಕೇಳುವ ಹಾಗಿಲ್ಲ ಇದು ನಮ್ಮ ಕೈಯಲ್ಲಿ ಆಗುವುದಿಲ್ಲ ಹಿಂದೆ ಕೂಡ ನಾನು 7 ವರ್ಷಗಳು ಇದ್ದೆ ಆದರೆ ಪ್ರಯತ್ನಪಟ್ಟರೂ ನಮ್ಮ ಕೈಯಲ್ಲಿ ಆಗಲಿಲ್ಲ ಹಿಂದಿನ ಸರಕಾರಗಳು ಕೂಡ ಮಾಡಲು ಆಗಲಿಲ್ಲ ಆದ್ದರಿಂದ ನನ್ನ ಕೈಲಾದಾಗ ಮಾಡುತ್ತೇನೆ ಎಂದು ಹೇಳಿದ್ದರೆ ನಾನು ಒಪ್ಪಿಕೊಳ್ಳುತ್ತಾ ಇದ್ದೆ ಆದರೆ ನೀವು ನಾನು ಮಾಡಿಯೇ ತೀರುತ್ತೇನೆ ಎಂದು ಹೇಳಿದ್ದೀರಿ ನೀವು ಕೊಟ್ಟಂಥ ಅದರಲ್ಲಿ ಇರಿಗೇಶನ್‌ಗೆ ನೀವು ಇಟ್ಟ ಒಟ್ಟುಹಣ ಎಷ್ಟೆಂದರೆ 1995-96ರಲ್ಲಿ 770ಕೋಟಿ ತೋರಿಸಿದ್ದೀರಿ ಆದರೆ ರಿವ್ಯಾಸ್ಡೆಪ್ಲಾನ್ ಲೇಔಟ್ ಇವೊತ್ತು ಎಷ್ಟು ನೀವು ಮಾಡಬಹುದು ಎಂದು ಹೇಳಿದ್ದೀರಿ ಎಂದರೆ 650 ಕೋಟಿಗಳು ಇದು ಎಲ್ಲಾ ಪ್ಲಾನ್‌ನಲ್ಲಿರತಕ್ಕಂಥಪ್ರಾಜ್ಟ್ಸ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್, ಘಟಪ್ರಭಾ, ಮಲಪ್ರಭಾ, ಹಿಪ್ಪರಗಿ ಬ್ಯಾರೇಜ್ ಕೂಡ ಇದರಲ್ಲಿ ಬಂತು ಎಲ್ಲಾ ಮಿಡಯಂ ಇರಿಗೇಶನ್ ಪ್ರಾಜೆಕ್ಟ್ಸ ಪ್ಲಾನ್‌ನಲ್ಲಿ ಇರತಕ್ಕಂಥವು ಎಲ್ಲಾ ಸೇರಿ 750ಕೋಟಿ ಇಟ್ಟರೆ ಅದರಲ್ಲಿ 650 ಕೋಟಿಗಳನ್ನು ಖರ್ಚು ಮಾಡುತ್ತೇನೆ ಎಂದು ರಿವ್ಯಾಸ್ಡ ಪ್ಲಾನ್ ಔಟ್‌ಲೇ ಹಾಕಿಕೊಂಡಿದ್ದೀರಿ ನೀವೇ ಹೇಳಿದ ಪ್ರಕಾರವೇ 100 ಕೋಟಿಗಳು ಕಡಿಮೆಯಾದವು. ಮತ್ತೆ ಈ ವರ್ಷ ಏನು ತೋರಿಸಿದ್ದೀರಿ ಅಂದರೆ, ಎಲ್ಲಾ ಪ್ರಾಜೆಕ್ಟ್‌ಗಳನ್ನು ಸೇರಿಸಿ 1035 ಕೋಟಿ ರಿವ್ಯಾಸ್ಡ ಪ್ಲಾನ್ ಔಟ್‌ಲೇ ಹಾಕಿಕೊಂಡಿದ್ದೀರಿ. ಈ ಪ್ಲಾನ್ ಔಟ್‌ಲೇಯೂ ಕೂಡ ನಿಲ್ಲುವುದಕ್ಕೆ ಸಾಧ್ಯವಿಲ್ಲ. ಹೋದ ವರ್ಷ ನೀವು ಪ್ಲಾನ್ ಔಟ್‌ಲೇನಲ್ಲಿ 3700 ಕೋಟಿಗಳನ್ನು ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. 3100 ಕೋಟಿಗೆ ಅದನ್ನು ಇಳಿಸಿದ್ದೀರಿ. ಅಲ್ಲಿ ಯಾವಾಗ 650 ಕೋಟಿ ಹೆಚ್ಚು ಕಡಿಮೆಯಾಯಿತೋ ಅದೇ ರೀತಿಯಾಗಿ ಈ ವರ್ಷ ಕೂಡ 1000 ಕೋಟಿಗೆ ಸಮೀಪ ಕಡಿಮೆ

ಆಯಿತು. ಇದನ್ನು ನೀವು ತೋರಿಸಲು ಮಾಡಿದ್ದೀರೋ? 750 ಕೋಟಿಗಳಲ್ಲಿ 650 ಕೋಟಿ ಎಂದು ತೋರಿಸಿ ಇಲ್ಲಿ 100 ಕೋಟಿಗಳನ್ನು ಕಡಿಮೆ ಮಾಡಿದ್ದೀರಿ. ಅದೇ ರೀತಿಯಲ್ಲಿ ಇವ್ವೊತ್ತು 1000 ಕೋಟಿ ತೋರಿಸಿರುವುದನ್ನು ಬಹಳ ಅಂದರೆ ನೀವು ಅಚೀವ್‌ಮೆಂಟ್ ಮಾಡುವುದು 700 ಅಥವಾ 800 ಕೋಟಿಗಳು ಬರಬಹುದು. 200 ಕೋಟಿಗಳಂತೂ ಕಡಿಮೆಯಾಗುತ್ತದೆ. ನೀವು ಮತ್ತೆ ರಿವ್ಯಾಸ್ಡ್ ಪ್ಲಾನ್ ಔಟ್‌ಲೇ ತೋರಿಸಿಯೇ ತೋರಿಸುತ್ತೀರಿ. ಹೀಗೆ ಈಪರಿಸ್ಥಿತಿಯು ಇದ್ದಾಗ, ನೀವು ಕೊಟ್ಟಂಥ ಡಾಕ್ಯುಮೆಂಟ್ಸ್‌ನ ಆಧಾರದ ಮೇಲೆ ಹೋದರೂ ಕೂಡ, ನಿಮ್ಮ ಸಾಧನೆಯು ಆಗುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಘೋಷಣೆಯಾಗಲೀ, ನಿಮ್ಮ ಅಲಾಟ್‌ಮೆಂಟ್ ಆಗಲೀ, ಇದು ಪೊಳ್ಳು ಘೋಷಣೆ. ಇದು ಈಗಾಗಲೇ ಅಲಾಟ್‌ಮೆಂಟ್‌ನ ವಿಚಾರ ಕೂಡ ಹೇಳಿದೆ. ಯಾವ ಯಾವ ವರ್ಷಕ್ಕೆ ಎಷ್ಟೆಷ್ಟು ಎಂದು. ಹಿಂದಕ್ಕೆ ನೀರಾವರಿ ಇಲಾಖೆಯವರು ಹಾಕಿಕೊಂಡಂಥ ಕಾರ್ಯಕ್ರಮವನ್ನು ಇವರು ಬದಲಾವಣೆ ಮಾಡಿದ್ದಾರೆ. 650 ಕೋಟಿ ಬಜೆಟ್ ಪ್ರಾವಿಜನ್ ಇರುವಲ್ಲಿ ಇವರು 250 ಕೋಟಿ ಮಾಡಿದ್ದಾರೆ. ಮತ್ತು ಎಲ್ಲಿ ನಾವು 250 ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಬೇಕೆಂಬ ಅಪೇಕ್ಷೆಯನ್ನು ಇಟ್ಟುಕೊಂಡು ಡಾಕ್ಯುಮೆಂಟ್ಸ್‌ನ್ನು ತಯಾರು ಮಾಡಿದ್ದವೋ, ಅಲ್ಲಿ ಇವರು ಇವ್ವೊತ್ತು 800 ಕೋಟಿಯನ್ನು ಸಾವಿರ ಕೋಟಿ ಎಂದು ಹೇಳುತ್ತಾರೆ. ಇನ್ನೊಂದು ಕ್ಲಾರಿಫಿಕೇಷನ್‌ನ್ನು ತಮ್ಮಲ್ಲಿ ಕೇಳುವುದೇನೆಂದರೆ, 1000 ಕೋಟಿಗಳನ್ನು ನಾವು ಮಾರ್ಚ್‌ನವರೆಗೆ ಮಾಡುತ್ತೇವೆಂದು ಹೇಳಿದ್ದರು. ಈಗ ಏನು ಹೇಳುತ್ತಾರೆ ಎಂದರೆ, ಮೊನ್ನೆ ಮಾನ್ಯ ಸಿದ್ಧರಾಮಯ್ಯನವರು ಮಾತನಾಡುವಾಗ 750 ಕೋಟಿಗಳನ್ನು ಜೂನ್ ಒಳಗಾಗಿ ನಾವು ಖರ್ಚು ಮಾಡುತ್ತೇವೆ, ಅಂದರೆ ಆ ಸಾವಿರ ಕೋಟಿ ಜೂನ್ ಒಳಗಾಗಿ ಖರ್ಚು ಮಾಡುವುದು ಹೋಯಿತು. ಈ ವರ್ಷದ ಬಜೆಟ್ ಒಟ್ಟು ಅಮೌಂಟ್ 1000 ಕೋಟಿಗಳನ್ನು ಖರ್ಚು ಮಾಡುತ್ತೇವೆಂಬ ವಾದ ನಿಮ್ಮದ್ದು ಇದ್ದರೆ, ಜೂನ್‌ವರೆಗೆ ಅದು 750 ಕೋಟಿ ಟಾರ್ಗೆಟ್ ಇದ್ದರೆ, ಒಟ್ಟು 1250 ಕೋಟಿಗಳನ್ನು ಅಪ್ಪರ್‌ಕೃಷ್ಣ ಪ್ರಾಜೆಕ್ಟ್‌ಗೆ ನೀವು ಖರ್ಚು ಮಾಡಬೇಕು. ಹೀಗೆ ಜೂನ್‌ನಿಂದ ಮಾರ್ಚ್ ಕೊನೆಯ ಒಳಗೆ ನಿಮಗೆ ಇದನ್ನು ಮಾಡಲು ಸಾಧ್ಯವೇ? ಹಾಗಾದರೆ ನೀವು ಜನರಿಗೆ ಏಕೆ ಸುಳ್ಳು ಹೇಳುತ್ತಿದ್ದೀರಿ? ಏಕೆ ಈ ಕೆಲಸವನ್ನು ಮಾಡುತ್ತೀರಿ? ಇದ್ದುದನ್ನು ಹೇಳಿ ಬಿಡಿ. ಇಷ್ಟು ಹಣ ನಮ್ಮಲ್ಲಿದೆ ಇಷ್ಟನ್ನು ನಾವು ಖರ್ಚು ಮಾಡಲು ಸಾಧ್ಯವಿದೆ ಎಂದು ಹೇಳಿ. ಸುಮ್ಮನೆ ಸ್ಪೆಸಿಫಿಕ್ ಕೊಡುವುದು, ಬೋಗಸ್ ಫಿಗರ್ಸ್ ಕೊಡುವುದು, ಹೇಳಿಕೊಳ್ಳುವುದು ಬೇಡ. ಬಜೆಟ್‌ನಲ್ಲಿ ಪ್ರಿಂಟ್ ಮಾಡಿ ಪ್ರೆಸ್ ಸ್ಟೇಟ್‌ಮೆಂಟ್‌ನಲ್ಲಿ ಹೇಳುವುದು ಬೇಡ. ಮೊನ್ನೆ ನಮ್ಮ ಮುಖ್ಯಮಂತ್ರಿಯವರು ಹೇಳಿದ್ದಾರೆ, ಆದರೆ ಇವ್ವೊತ್ತಿನವರೆಗೆ ನಾವು ಅಷ್ಟು ಖರ್ಚು ಮಾಡಲು ಆಗಲಿಲ್ಲ, ಜೂನ್‌ವರೆಗೆ 750 ಕೋಟಿ ಖರ್ಚು ಮಾಡುತ್ತೇವೆಂದಿದ್ದಾರೆ. ಸಾವಿರ ಕೋಟಿ ಖರ್ಚು ಮಾಡುತ್ತೇವೆಂದು ಇವರು ಹೇಳುತ್ತಾರೆ. ಇದು ಏನು ತೋರಿಸುತ್ತದೆ ಅಂದರೆ, ನಿಮಗೆ ಯಾವ ಇರಿಗೇಷನ್ ಪ್ರಾಜೆಕ್ಟ್ ಬಗ್ಗೆ ಆಸಕ್ತಿ ಇದೆಯೆಂದು ಹೇಳಿಕೊಂಡು ಬರುತ್ತಾ ಇದ್ದೀರಿ, ಆದರಲ್ಲಿ ನಿಮಗೆ ಆಸಕ್ತಿ ಇಲ್ಲ. ಹೇಗಾದರೂ ಕಾಲ ಕಳೆಯಬೇಕು. ಈಗಾಗಲೇ 15 ತಿಂಗಳು ಕಳೆದು ಹೋಯಿತು. ಅಪ್ಪರ್‌ಕೃಷ್ಣ ಪ್ರಾಜೆಕ್ಟ್‌ಗೆ ಅಥವಾ ಕೃಷ್ಣಾ ಬೇಸಿನ್‌ನಲ್ಲಿರತಕ್ಕಂಥ ಪ್ರಾಜೆಕ್ಟ್‌ಗಳಿಗೆ ಹಾಕಿದಂಥ ಗಡುವು, ನಿಮ್ಮ ಪೀರಿಯಡ್ ಮುಗಿಯುವುದು ಎರಡೂ ಸಮವಾಗಿದೆ. ಅದೂ ಎರಡು ಸಾವಿರ ಮತ್ತು ನಿಮ್ಮ ಮುಂದಿನ ಎಲೆಕ್ಷನ್ ಕೂಡ 2000. ಅಲ್ಲಿಯವರೆಗೆ ನೀವು ಉಳಿದರೆ 2000 ಇಸವಿಗೆ ಕೃಷ್ಣ ಬೇಸಿನ್ ಪ್ರಾಜೆಕ್ಟ್

ಆಗತಕ್ಕಂಥಾದ್ದು. ಅದನ್ನು ಮಾಡುವಂಥ ಮಹತ್ತರವಾದಂಥ ಜವಾಬ್ದಾರಿಯು ನಿಮ್ಮ ಮೇಲಿದೆ. ಅದನ್ನು ನಿರ್ವಹಿಸುವಾಗ ಕಣ್ಣಲ್ಲಿ ಕಣ್ಣಿಟ್ಟು ಪ್ರತಿಯೊಂದನ್ನು ನೋಡಿಕೊಂಡು ನೀವು ಹೇಳಿಕೆ ಕೊಡಬೇಕೇ ಹೊರತಾಗಿ, ಸುಮ್ಮನೆ ಹೇಳಿದ್ದನ್ನು ಕೇಳುತ್ತಾರೆಂದು ನೀವು ಹೇಳಿಕೊಂಡರೆ ಅದರಿಂದ ಯಾವ ಪ್ರಯೋಜನವೂ ಕೂಡ ಆಗುವುದಿಲ್ಲ. ಇವರು 2000 ಇಸವಿಯೊಳಗಾಗಿ ಮುಗಿಸುತ್ತೇವೆಂದು ಹೇಳುತ್ತಿದ್ದವರು ಈಗ ಸುಮಾರು ಹೊಸ 8 ಪ್ರಾಜೆಕ್ಟ್‌ಗಳು ಇವೆ. ಕೃಷ್ಣ ಬೇಸಿನ್ 2ನೇ ಘಟ್ಟ, ಮಾರ್ಕಾಂಡೆಯ ನೀರಾವರಿ ಯೋಜನೆ, ರಾಮಪಾಳ ಏತ ನೀರಾವರಿ ಯೋಜನೆ, ಹಿಪ್ಪರಗಿ ನೀರಾವರಿ ಯೋಜನೆ, ಭೀಮಾ ಏತ ನೀರಾವರಿ ಯೋಜನೆ, ಚಿಟಗೂರು, ತುಂಗಾ ಬಲದಂಡೆ ಯೋಜನೆ, ದೂದಗಂಗಾ. ಇವುಗಳು ಇನಿಶಿಯಲ್ ಸ್ಟೇಜ್‌ನಲ್ಲಿರತಕ್ಕಂಥವುಗಳು. ಇದಕ್ಕೆ ಹೆಚ್ಚಿನ ಹಣವೂ ಇಲ್ಲ. ಇದರ ಬಗ್ಗೆ ನೀವೇನು ಚಿಂತನೆ ಮಾಡುತ್ತೇವೆಂದು ಹೋದ ಬಜೆಟ್‌ನಲ್ಲಿ ಹೇಳಿದ್ದೀರಿ, ಆದರಲ್ಲಿಯೂ ಕೂಡ ಅಚೀವ್‌ಮೆಂಟ್ ಆಗಿಲ್ಲ. ಈ ಎಂಟು ಪ್ರಾಜೆಕ್ಟ್ಸ್ ಅಲ್ಲದೇ ಬಚಾವತ್ ಅವಾರ್ಡ್‌ನ ಪ್ರಕಾರ (ಬಿ) ಗ್ರೂಪ್‌ನಲ್ಲಿ ಬರತಕ್ಕಂಥ 8 ಯೋಜನೆಗಳಿವೆ ಅವುಗಳನ್ನಂತೂ ನೀವು ಮುಟ್ಟಲಿಕ್ಕೇ ಹೋಗಿಲ್ಲ. ಈ ಎಂಟು ಯೋಜನೆಗಳಲ್ಲಿ ಆಲಮಟ್ಟಿ ಎಡದಂಡೆ ಕಾಲುವೆ ಏತ ನೀರಾವರಿ, ಆಲಮಟ್ಟಿ ಬಲದಂಡೆ ಕಾಲುವೆ ಏತ ನೀರಾವರಿ, ಧಾಮಪೂರ ಏತ ನೀರಾವರಿ, ಮುಳವಾಡ ಏತನೀರಾವರಿ, ಇಂಡಿ ಶಾಖಾ ಕಾಲುವೆ ಏತ ನೀರಾವರಿ, ಭೀಮಾ ಏತ ನೀರಾವರಿ ಯೋಜನೆ, ಇವೆ. ಇವೆಲ್ಲವನ್ನೂ ಕೂಡ ನಾವು ಲೆಕ್ಕಕ್ಕೆ ಹಾಕಿಕೊಂಡರೆ ಎಷ್ಟರ ಮಟ್ಟಿಗೆ ನೀವು ಗುರಿಯನ್ನು ತಲುಪಲು ತಯಾರಾಗಿದ್ದೀರಿ ಎಂಬುದು ಗೊತ್ತಾಗುತ್ತದೆ. ಆ ಮೇಲೆ ಫಿಸಿಕಲ್ ಟಾರ್ಗೆಟ್. ಯಾವುದೇ ಒಂದನ್ನು ನಾವು ಅಚೀವ್ ಮಾಡಬೇಕೆಂದರೆ ಇವೊತ್ತು ನಮ್ಮ ಕೃಷ್ಣ ಪ್ರಾಜೆಕ್ಟ್ ಒಂದರಿಂದಲೇ ಸುಮಾರು 30 ಲಕ್ಷ ಎಕರೆಗಳಷ್ಟು ನೀರಾವರಿ ಆಗತಕ್ಕಂಥ ಸಾಧ್ಯತೆಯು ಇದೆ. ಅಂದರೆ ನಮ್ಮ ರಾಜ್ಯದಲ್ಲಿ ಸುಮಾರು 55 ಲಕ್ಷ ಹೆಕ್ಟೇರ್‌ಗಳ ಪೈಕಿ 30 ಲಕ್ಷ ಹೆಕ್ಟೇರ್‌ಗಳು ಕೃಷ್ಣ ಬೇಸಿನ್ ಪ್ರಾಜೆಕ್ಟ್‌ನಲ್ಲಿದೆ. ಅಂದರೆ 60 ಪರ್ಸೆಂಟ್ ನಷ್ಟು ನೀರಾವರಿ ಯೋಜನೆಗಳು ಇಲ್ಲಿ ಬರುತ್ತವೆ. ನೀವು ರೈತರ ಪರವಾಗಿ ಇರತಕ್ಕಂಥವರು ಎಲ್ಲಿ 60 ಪರ್‌ಸೆಂಟ್ ನೀರಾವರಿ ಯೋಜನೆಗಳು ಇವೆ ಅವುಗಳಿಗಾಗಿ 250 ಕೋಟಿ ಹಣವನ್ನು ಕೊಟ್ಟಿದ್ದೀರಿ. ಅದನ್ನು ನೋಡಿದರೆ ನಿಮಗೆ ಎಷ್ಟರ ಮಟ್ಟಿಗೆ ಆಸಕ್ತಿ ಇದೆ ಎಂದು ಗೊತ್ತಾಗುತ್ತದೆ. ಕಾವೇರಿ ಬೇಸಿನ್‌ಗೆ ಹಣ ಕೊಡಬಾರದು ಎಂದು ನಾನು ಹೇಳುತ್ತಿಲ್ಲ. ನೀವು ಉಪಯೋಗ ಮಾಡಲಿಲ್ಲವಾದರೆ ನಮಗೆ ನೀರು ಬಿಡಿ ಎಂದು ಹೇಳುತ್ತಾ ಇರುತ್ತಾರೆ. ಅದಕ್ಕಾಗಿ ನೀವು ಏನಾದರೂ ಆಲ್ಟರ್‌ನೇಟಿವ್ ಅರೇಂಜ್‌ಮೆಂಟನ್ನು ಮಾಡಿಕೊಂಡು, ಈ ಪ್ರಾಜೆಕ್ಟ್‌ಗಳನ್ನು 2000 ಇಸವಿಯೊಳಗಾಗಿ ನೀವು ಮುಗಿಸದೇ ಹೋದರೆ 30 ಲಕ್ಷ ಹೆಕ್ಟೇರ್‌ಗೆ ನೀವು ನೀರು ಕೊಡದೇ ಹೋದರೆ, ಈ ರಾಜ್ಯಕ್ಕೆ, ಈ ದೇಶದ ರೈತರಿಗೆ ನಾನು ದ್ರೋಹ ಮಾಡಿದಂತಾಗುತ್ತದೆ ಎಂಬುದು ನಿಮ್ಮ ಮನಸ್ಸಿಗೆ ಬರಬೇಕು. ಅದಕ್ಕೆ ನೀವೇನು ಚಿಂತನೆ ಮಾಡಿದ್ದೀರಿ? ಈ ಬಗ್ಗೆ ನಿಮ್ಮ ಚಿಂತನೆ ಮತ್ತು ಕಾರ್ಯಕ್ರಮಗಳು ಇದ್ದರೆ ಅದರಿಂದ 30 ಲಕ್ಷ ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿಯಾಗುತ್ತದೆ ಅದರ ಮೂಲಕ ನಿಮಗೂ ಭೂಷಣವಾಗುತ್ತದೆ ಎಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಆದರೆ ಆ ಬಗ್ಗೆ ಅನುಕೂಲ ಮಾಡಿಕೊಡತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಬಜೆಟ್‌ನಲ್ಲಂತೂ ನಾನು ಹೇಳಿದಂತೆ ಸುಮ್ಮನೆ ನಾಮಕಾವಸ್ಥೆ, ಉಳಿದಂತೆ ಡೈಲಿ ವೇಜರ್ಸ್‌ನವರು ಇರುತ್ತಾರಲ್ಲ ಅಧ್ಯಕ್ಷರೇ, ಅವರು ಸ್ಕೂಲಿ

ಮಾಡಿಯೇ ತಿನ್ನಬೇಕು. ಕೂಲಿ ಇಲ್ಲಾಂದರೆ ಊಟವಿಲ್ಲ, ಹಾಗಾಗಿದೆ ಕೃಷ್ಣ ಕಥೆ. ಆ ಕಾರ್ಪೊರೇಷನ್‌ನಲ್ಲಿ ಹಣ ಬಂದರೆ ಕೆಲಸ ಇಲ್ಲದಿದ್ದರೆ ಇಲ್ಲ, ನಾವೇನು ಮಾಡಲಪ್ಪ ಪ್ರಯತ್ನ ಪಟ್ಟಿ, ನಾನು ಹೇಳಿಕೊಂಡೆ ಯಾರೂ ಕೊಡಲು ಮುಂದೆ ಬರುತ್ತಿಲ್ಲ ನನ್ನ ಪ್ರಯತ್ನ ನಾನು ಮಾಡಿದ್ದೇನೆ, ಇದಕ್ಕಿಂತ ಹೆಚ್ಚು ನಾನು ಮಾಡುವುದಕ್ಕಾಗುವುದಿಲ್ಲ ಎಂದು ಹೇಳುವುದು. ಯಾವ ರೀತಿಯಾಗಿ ಮನುಷ್ಯನ ಜೀವನದಲ್ಲಿ ಡೈಲಿವೇಜ್ ಆರ್ನರ್ಸ್ ತಾವೇ ದಿನದಿನಕ್ಕೆ ದುಡಿದು ಉಣ್ಣುವರೋ ಅದೇ ರೀತಿ ನೀವೂ ಸಂಪಾದನೆ ಮಾಡಿ ನೀವು ಕಟ್ಟಿಕೊಳ್ಳಿ, ಆದರೆ ಉಳಿದ ಪ್ರಾಜೆಕ್ಟ್‌ಗೆ, ಸರ್ಕಾರಿ ನೌಕರಿ ಇದ್ದ ಹಾಗೆ, ಅದು ಪರ್ಮನೆಂಟ್, ನೀವು ಕೆಲಸ ಮಾಡಲಿ, ಮಾಡದಿರಲಿ, ಹೇಗೆ ಸಂಬಳ ಸಿಗುತ್ತದೆಯೋ ಹಾಗೆ ಇದು ಹೀಗೆ. ಈ ವ್ಯತ್ಯಾಸ ಇದೆ ನೋಡಿ ಅಧ್ಯಕ್ಷರೇ, ಅದು ನಿಮ್ಮ ಮನಸ್ಸಿಗೆ ಬಂದರೆ ಸರಿ, ಇಲ್ಲದಿದ್ದರೆ ನೀವು ನಮ್ಮ ಪರವಾಗಿ ವಾದ ಮಾಡಬಹುದೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್:- ಮಾನ್ಯ ಸದಸ್ಯರಾದ ಖರ್ಗೆಯವರು ಎಷ್ಟು ಕಳಕಳಿಯಿಂದ ಮಾತನಾಡುತ್ತಿದ್ದಾರೆ. ಇಷ್ಟು ವರ್ಷ ಆಳ್ವಿಕೆ ಮಾಡಿದಿರಲ್ಲ ಇದು ಆಗ ಅವರಿಗೆ ನೆನಪಾಗಲಿಲ್ಲವೇ? ಕೃಷ್ಣಾ ನದಿ ನೀರಾವರಿ ಕೆಲಸ ಮಾಡಿದರೆ ಅರ್ಧ ಕರ್ನಾಟಕದ ಜನ ಇವತ್ತು ಹಸಿರು ಉಣ್ಣುತ್ತಾರೆ ಹಸಿರು ಐಸಿರಿಬರುತ್ತದೆಂಬುದೆಲ್ಲ ತಿಳಿದಿದ್ದರೂ ಕೂಡ ಏಕೆ ಅವರ ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲ, ಏಕೆ ಕಾರ್ಯಗತ ಮಾಡಲಿಲ್ಲ 2 ಸಾವಿರ ಇಸವಿಯೊಳಗೆ ಆ ನೀರನ್ನು ಬಳಸಿಕೊಳ್ಳಬೇಕೆಂಬುದು ಇವತ್ತು ತಿಳಿದಿರುವ ವಿಷಯವಲ್ಲ, ಹಿಂದೆಯೇ ತಿಳಿದಿತ್ತು. ಆದರೂ ಆಗಿನ ಸರ್ಕಾರ ಯಾಕೆ ಕೈಕಟ್ಟಿಕೊಂಡು ಕುಳಿತಿತ್ತು ಎಂದು ಕೇಳುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನೀವು 8 ವರ್ಷ ಅವರ ಜೊತೆಯಲ್ಲೆ ಇದ್ದು ಆಳಿದಿರಲ್ಲ ಆವಾಗ ಕೇಳಿದ್ದರೆ ಚೆನ್ನಾಗಿತ್ತು. ನಮ್ಮ ಕಾಲದಲ್ಲಿ ಎಂದೂ ನಾವು ಸಾವಿರ ಕೋಟಿ ಖರ್ಚು ಮಾಡುತ್ತೇವೆಂದು ಹೇಳಿಲ್ಲ. ಡಾಕ್ಯುಮೆಂಟ್ ಸ್ವಲ್ಪ ಓದಿ. ನಾವು 200 ಕೋಟಿ ಇಟ್ಟರೆ 170-180 ಕೋಟಿ ಖರ್ಚು ಮಾಡುವ ಪ್ರಯತ್ನ ಮಾಡಿದ್ದೇವೆ. ನಿಮ್ಮಂತೆ ನಾವು ಹತ್ತು ಸಾವಿರ ಕೊಡುತ್ತೇವೆ, ಒಂದೇ ದಿವಸದಲ್ಲಿ ಆಕಾಶ ಇಳಿಸುತ್ತೇವೆ ಎಂದು ಹೇಳಲಿಲ್ಲ. ನಾವು ಯಾವಾಗಲೂ ಬಜೆಟರಿ ಪ್ರಾವಿಷನ್ ಎಷ್ಟು ಮಾಡುತ್ತಿದ್ದೆವೋ ಆದರಲ್ಲಿ 70-80 ಪರ್ಸೆಂಟ್‌ವರೆಗೆ ಖರ್ಚು ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಿ ಎಷ್ಟರ ಮಟ್ಟಿಗೆ ಸಾಧನೆ ಮಾಡಬೇಕಾಗಿತ್ತೋ ಮಾಡಿದ್ದೇವೆ. ಆದರೆ ನೀವು 2 ಸಾವಿರದೊಳಗೆ ನಾವು ಮಾಡುತ್ತೇವೆ ಎಂದು ಹೇಳಿ ಸಾವಿರ ಕೋಟಿ ನಮಗೆ ತೋರಿಸಿ ಬಜೆಟ್‌ನಲ್ಲಿ 200 ಕೋಟಿ ಇಡುತ್ತೀರೋ ಅಧ್ಯಕ್ಷರೇ, ಈ ಡಾಕ್ಯುಮೆಂಟನ್ನು ಅವರಿಗೆ ಕಳಿಸಿಕೊಡುತ್ತೇನೆ, ಓದಿಕೊಳ್ಳಲಿ, ಆಮೇಲೆ ಹೇಳಿ. ನಾನು ಹೇಳುವುದೇನೆಂದರೆ, ಬರೀ ಅಪ್ಪರ್‌ಕೃಷ್ಣ ಯೋಜನೆ ಒಂದೇ ಅಲ್ಲ ಇಡೀ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆಯ ತುಂಗ ಇವೆಲ್ಲ ಪ್ರಾಜೆಕ್ಟ್‌ಗಳು ಬರುತ್ತವೆ ಇವಕ್ಕೆಲ್ಲ ಸೇರಿಸಿ ನೀವು ಹಣ ಸಂಗ್ರಹ ಮಾಡಬೇಕಾಗಿದೆ. ಅದಕ್ಕಾಗಿ ನೀವು ಮನಸ್ಸು ಮಾಡುತ್ತಿಲ್ಲವೆಂದು ನಾನು ಹೇಳುತ್ತಿದ್ದೇನೆ. ಹಾಗೆ ಸಂಗ್ರಹಣೆ ಮಾಡಬೇಕೆಂದರೆ ಒಂದು ಕಾರ್ಯಕ್ರಮ ಬೇಕು. ಅದನ್ನಿಟ್ಟುಕೊಂಡು ಇಷ್ಟು ಹಣ ನನ್ನ ಹತ್ತಿರ ಇದೆ, ಇಷ್ಟರವರೆಗೆ ಈ ವರ್ಷ ಖಂಡಿತವಾಗಿ ನೀರು ಕೊಡುತ್ತೇನೆಂಬುದು ಇರಬೇಕು. ನಿಮ್ಮ ಹತ್ತಿರ ಹಣ ಇಲ್ಲ ಆದರೆ ಗುರಿ ಮಾತ್ರ ಇಷ್ಟು ಮುಟ್ಟುತ್ತೇವೆಂದು ಹೇಳುತ್ತಿದ್ದೀರಿ, ಇದು ತಪ್ಪು. ಅದಕ್ಕಾಗಿಯೇ ನಾನು ಹೇಳಿದ್ದುದು

ಕನ್ನಡಿಯೊಳಗಿನ ಗಂಟು ನಮಗೆ ತೋರಿಸಬೇಡಿ ಎಷ್ಟಾಗುತ್ತದೆಯೋ ಅಷ್ಟು ಹೇಳಿ, ಆಗದಿದ್ದರೆ 2 ಸಾವಿರ ವರ್ಷದೊಳಗೆ ಇದು ಆಗುವುದಿಲ್ಲಪ್ಪ ಮುಂದೆ ನೋಡೋಣ ಅಂತ ಹೇಳಿ. ಈ ದೇಶದ ಜನ ಬಂದು ನಿಮ್ಮನ್ನೇನು ಶೂಲಕ್ಕೆ ಏರಿಸುವುದಿಲ್ಲ. ಆದರೆ ಸುಳ್ಳು ಹೇಳಿಕೊಂಡು ಏಕೆ ಹೋಗುತ್ತೀರೆಂದು ನಾನು ಕೇಳುತ್ತಿದ್ದೇನೆ. ಇದು ಒಂದು, ಇನ್ನೊಂದು, ಸ್ಟೇಜ್-2ನಲ್ಲಿ ಗರಿಷ್ಟ ನೀರಿನ ಬಳಕೆ ಪ್ರಮಾಣ 200 ಟಿ.ಎಂ.ಸಿ. ಇದೆ. The utilisation of water 302 TMC anticipated to be allocated to the project to bring under irrigation an additional 4.2 lakh hectares. ಕೃಷ್ಣಾ ಮೇಲ್ದಂಡೆ ಎರಡನೆ ಸ್ಟೇಜ್‌ನಲ್ಲಿ ಸುಮಾರು 4.25 ಲಕ್ಷ ಹೆಕ್ಟೇರ್ ಏರಿಯಾಕ್ಕೆ ನೀರು ಕೊಡಬಹುದು. ಸುಮಾರು 10 ಲಕ್ಷ ಎಕರೆಯೆಂದು ತಿಳಿದುಕೊಳ್ಳಿ. ಆದರಲ್ಲಿ ಅನೇಕ ಲಿಫ್ಟ್ ಇರಿಗೇಶನ್ಸ್ ಇವೆ, ಫ್ಲೋ ಇರಿಗೇಶನ್ನೂ ಇದೆ, ಭೀಮಾ ಪ್ರಾಜೆಕ್ಟ್‌ನಲ್ಲಿ ಸರ್ವೆ ಕೆಲಸ ಕೂಡ ನಡೆದಿಲ್ಲ. ಒಂದು ಸಲ ರಸ್ತೆ ಮಾಡಿದರು, ಆಮೇಲೆ ಟೋಕನ್ ಗ್ರಾಂಟ್ ಅಂತ 1 ಕೋಟಿ ಇಟ್ಟರು, ಪುನಃ ಅದನ್ನು ಡೈವರ್ಟ್ ಮಾಡಿದರು. ಅನೇಕ ಸಾರಿ ಏನಾಗುತ್ತದೆ ಕೃಷ್ಣಾ ಮೇಲ್ದಂಡೆಗೆ ಹೆಚ್ಚಿಗೆ ಹಣ ತೋರಿಸಿದರೂ ಮತ್ತು ಕೆಲವೊಂದು ಪ್ರಾಜೆಕ್ಟ್‌ಗಳಲ್ಲಿ ಹೆಚ್ಚಿನ ಹಣ ಬಜೆಟ್‌ನಲ್ಲಿ ತೋರಿಸಿ ಅದು ಖರ್ಚು ಮಾಡದೆ ಆ ಹಣವನ್ನು ಡೈವರ್ಟ್ ಮಾಡಿದ್ದು ಕೂಡ ಉಂಟು. ಈ ಆಪಾದನೆಯನ್ನು ನೇರವಾಗಿ ನಾನು ಮಾಡುತ್ತೇನೆ. ಹಿಂದೆ ಆಗಿತ್ತು, ಆಗ ನಮಗೆ ಏನು ಹೇಳಿದರು ಅಂದರೆ ಅಲ್ಲಿ ಸಿಬ್ಬಂದಿ ಇರಲಿಲ್ಲ, ಯಾರೂ ಆಪರ್‌ಕೃಷ್ಣಕ್ಕೆ ಹೋಗಲು ತಯಾರಾಗಿರಲಿಲ್ಲ ಅದಕ್ಕೇ ಅಲ್ಲಿನ ಸಿಮೆಂಟ್ ಹಾಳಾಗಬಾರದೆಂದು ಬೇರೆ ಭಾಗಕ್ಕೆ ತಂದೆವು ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೋದ ಸಲ ಇಲ್ಲಿ ಒಪ್ಪಿಕೊಂಡಿದ್ದಾರೆ. ಇದಕ್ಕೆ ಮತ್ತೊಮ್ಮೆ ಕನ್ನಡಿ ಅವರ ಮುಂದೆ ಹಿಡಿಯುವ ಅವಶ್ಯಕತೆಯಿಲ್ಲವೆಂದು ತಿಳಿದುಕೊಂಡಿದ್ದೇನೆ. ಆ ಸಂದರ್ಭದಲ್ಲಿ ಅಲ್ಲಿ ಕೆಲಸವಾಗದೇ ಇದ್ದಾಗ ಅದನ್ನು ನಾವು ಡೈವರ್ಟ್ ಮಾಡುತ್ತೇವೆ ಎಂದು ಅವರೇ ಹೇಳಿದ್ದಾರೆ. ಆದರೆ ಇವತ್ತು ಪುನಃ ಆ ಪರಿಸ್ಥಿತಿ ಬಂದಿದೆ ಏನೆಂದರೆ ಹೆಚ್ಚಿನ ಹಣ ಕೊಡುತ್ತೇನೆಂದು ಹೇಳಿ ಸಾಧನೆ ಸಾಧಿಸಿಲ್ಲ. ಇನ್ನೊಂದು, ನಮ್ಮ ಆಲಮಟ್ಟಿ ಡ್ಯಾಂ ನಿಮಗೆ ಗೊತ್ತಿದೆ, ತಾವು ಕೂಡ ಸದನದ ಸಮಿತಿಯಲ್ಲಿ ಕೆಲಸ ಮಾಡಿದ್ದೀರಿ. ಅದು 1997ರಲ್ಲಿ 524 ಮೀಟರ್ ಎತ್ತರ ಮಾಡುತ್ತೇವೆಂದು ಹೇಳಲಾಗಿತ್ತು. ಅಷ್ಟು ಎತ್ತರ ಮಾಡಬೇಕೆಂದರೆ ಸುಮಾರು 95 ಹಳ್ಳಿ ತಕ್ಷಣ ಹೋಗುತ್ತವೆ, ಅದಾದಮೇಲೆ ಒಟ್ಟು 136 ಹಳ್ಳಿಗಳು ಇವುಗಳನ್ನು ಪುನರಸ್ವತಿ ಮಾಡುವ ಕೆಲಸ ಸ್ವಲ್ಪ ಮಟ್ಟಿಗೆ ಈ ತಿಂಗಳಲ್ಲಿ ನಡೆದಿದೆ ಹೊರತಾಗಿ ಇದರ ಹಿಂದೆ 14 ತಿಂಗಳು ಇದರ ಬಗ್ಗೆ ಯೋಚನೆ ಚಿಂತನೆ ನಡೆಯಲಿಲ್ಲ. ಯಾವಾಗ ಈ ಸದನದಲ್ಲಿ ಜೆ.ಟಿ.ಪಾಟೀಲರು, ಮನಗೋಳಿ ಪಾಟೀಲರು ಎಲ್ಲಾ ಗಲಾಟೆ ಮಾಡಿ ಕೇಳಿದ ಮೇಲೆ, ಧರಣಿ ಮಾಡುತ್ತೇವೆಂದು ಬಂದ ಮೇಲೆ, ಆಗ ಒಬ್ಬ ವಿಶೇಷ ಅಧಿಕಾರಿಯನ್ನು ಹಾಕಿ ಅವನಿಗೆ ಕೆಲವು ಅಧಿಕಾರಿಗಳನ್ನು ಕೊಟ್ಟು ಇವತ್ತು ಸ್ವಲ್ಪ ಕೆಲಸ ನಡೆದಿದೆ. ಆದರೂ ಅಲ್ಲೇನಾಗಿದೆ ಕೆಲಸ ಏಕೆ ನಿಂತು ಹೋಗಿದೆ ಎಂದರೆ ಹಣದ ಕೊರತೆ, ತರಾತುರಿಯಲ್ಲಿ 10 ಕೋಟಿ ಬಿಡುಗಡೆ ಮಾಡಿದ್ದು ಬಿಟ್ಟರೆ ಇನ್ನೂ ಅವರು ಹೇಳಿದಷ್ಟು ಹಣ ಬಿಡುಗಡೆಯಾಗಿಲ್ಲವೆಂಬ ಮಾತನ್ನು ಸ್ಪಷ್ಟಗೊಳಿಸುತ್ತೇನೆ. ಇದಕ್ಕೆ ಪುರಾವೆಯೆಂದರೆ ಅವರೇ ಕೊಟ್ಟಿರುವ ಡಾಕ್ಯುಮೆಂಟ್: ಸಬ್ಜೆಕ್ಟ್ ಕಮಿಟಿದು, ನಿಧಾನವಾಗಲು ಕಾರಣವೆಂದರೆ ಕೆಲವು ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಬರಬೇಕು. Project is under in-

vestigation. Infrastructural works are programmed to be taken up. Project is yet to be administratively approved. Infrastructure and investigation works, First stage, are proposed to be taken up. ಇದು ಅವರ ಅಧಿಕಾರಿಗಳ ರಿಮಾರ್ಕ್ಸ್. ನಾವು ಬಿಡುಗಡೆ ಮಾಡುವುದು ಅಲ್ಲ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಇನ್‌ಫ್ರಾಸ್ಟ್ರಕ್ಚರ್ ಬಿಲ್ಡಪ್ ಮಾಡಬೇಕೆಂದು ಅವರ ಅಧಿಕಾರಿಗಳೇ ಹೇಳುತ್ತಾರೆ. 15 ತಿಂಗಳಾದ ಮೇಲೆ ಈ ವರದಿಯನ್ನು ಅವರು ಕೊಟ್ಟಿದ್ದುದು. ಇದು ಅವರ ಇಲಾಖೆಯಿಂದ ಬಂದಂತಹ ವರದಿ. ಈಗ ನಮ್ಮ ಮುದಗೋಳ, ಜೀವರ್ಗಿ ಬ್ರಾಂಚಿನಲ್ಲಿ ನಾರಾಯಣಪುರ ರೈಟ್ ಬ್ಯಾಂಕ್ ಕೆನಾಲ್‌ನಲ್ಲಿ ಇಂಡಿ ಬ್ರಾಂಚಿನಲ್ಲಿ ಏನು ಕೆಲಸ ನಡೆದಿದೆ ಅಂದರೆ ಹಿಂದೆ ನಮ್ಮ ಸರಕಾರವಿದ್ದಾಗ ಪೀಸ್ ವರ್ಕ್ ಮೇಲೆ ಕೆಲಸ ಕೊಟ್ಟಿದ್ದರು. ಮಾನ್ಯ ಮುಖ್ಯ ಮಂತ್ರಿಗಳು ಈ ಪೀಸ್ ವರ್ಕ್‌ನಲ್ಲಿ ಸಾಕಷ್ಟು ದುಂದು ವೆಚ್ಚವಾಗಿದೆ, ಕರಪ್‌ಷನ್ ಜಾಸ್ತಿಯಾಗಿದೆ ಅನೇಕ ಅಧಿಕಾರಿಗಳು ಮತ್ತು ಕಂಟ್ರಾಕ್ಟರುಗಳು ಅವರಿಬ್ಬರೂ ಶಾಮೀಲಾಗಿ ಹಣವನ್ನು ಹೊಡೆದುಕೊಳ್ಳುತ್ತಿದ್ದಾರೆ. ಅದಕ್ಕಾಗಿ ಪ್ರಾಜೆಕ್ಟಿನಲ್ಲಿ ಇರತಕ್ಕಂತಹ ಹಣ ಸಾಕಷ್ಟು ಪೋಲಾಗುತ್ತಿದೆ ಎಂದು ನಿಲ್ಲಿಸಿದರು. ಆದರೆ ಕೊನೆಗೆ ಏನಾಯಿತೆಂದರೆ ಪುನಃ ಪೀಸ್ ವರ್ಕ್ ಮಿಲೆ 5 ಕೋಟಿಯವರೆಗೆ ತೆಗೆದುಕೊಳ್ಳಬೇಕೆಂದು ಅವರೇ ಆರ್ಡರ್ ಮಾಡಿದರು. ಯಾರು ಇದರಲ್ಲಿ ಪೋಲಾಗುತ್ತಿದೆ ಹಾಳಾಗುತ್ತಿದೆ ಕರಪ್‌ಷನ್ ಜಾಸ್ತಿಯಾಗಿದೆ ಫೇವರಿಟಿಸಮ್ ಇದೆ ನೆಪೋಟಿಸಮ್ ಇದೆ ಎಂದು ವಾದ ಮಾಡಿ ನಿಲ್ಲಿಸಿದರೋ ಅವರೇ ಪುನಃ ಆರ್ಡರ್ ಕೊಟ್ಟು 5 ಕೋಟಿಯವರೆಗೆ ಪೀಸ್ ವರ್ಕ್ ಕೊಟ್ಟಿದ್ದಾರೆ. ನಾರಾಯಣಪುರ ರೈಟ್ ಬ್ಯಾಂಕ್ ಕೆನಾಲ್, ಜೀವರ್ಗಿ, ಇಂಡಿ ಕೆನಾಲ್‌ನಲ್ಲಿ ಇವೆಲ್ಲಾ ಕಡೆ ಪುನಃ ಕೆಲಸ ಪ್ರಾರಂಭ ಮಾಡಿ ಎಂದು ಆದೇಶ ಕೊಟ್ಟರು. ನಿಗಮದ ಅಧ್ಯಕ್ಷರು ಅಲ್ಲಿರತಕ್ಕಂತಹ ಚೀಫ್ ಇಂಜಿನಿಯರ್ಸ್ ಎಲ್ಲರೂ ಇವತ್ತು ಮುಖ್ಯ ಮಂತ್ರಿಗಳ ಆದೇಶದ ಪ್ರಕಾರ ಕೆಲಸಗಳನ್ನು ಕೊಡುತ್ತಿದ್ದಾರೆ. ಇದೇ ಪಾಲಿಸಿ ನಿಮ್ಮದು ಇದ್ದಿದ್ದರೆ, ಅದಕ್ಕೆ ನೀವು 1 ವರ್ಷ ಏಕೆ ತೆಗೆದುಕೊಂಡಿರಿ. ಈ ಪೀಸ್ ವರ್ಕ್ ಬೇಸಿಸ್ ಮೇಲೆ ಮೊದಲು ನಡೆದಂತಹ ಕೆಲಸ ಕಳಪೆ ದರ್ಜೆ ಕೆಲಸವಾಗುತ್ತದೆಂದು ತಿಳಿದುಕೊಂಡು, ಕೆಟ್ಟ ಕೆಲಸವಾಗುತ್ತದೆಂದು ತಿಳಿದುಕೊಂಡು ಅದರಲ್ಲಿ ಕರಪ್‌ಷನ್ ಆಗುತ್ತದೆಂದು ತಿಳಿದುಕೊಂಡು ಸ್ಟಾಪ್ ಮಾಡಿದಂತಹವರು ಒಂದು ವರ್ಷವಾದ ಮೇಲೆ ಪುನಃ ಅದೇ ಆದೇಶ ಕೊಟ್ಟಿದ್ದೀರಿ. ನನಗೆ ಗೊತ್ತಾಗಿದ್ದು ಏನೆಂದರೆ ಅವರ ಇಂಟೆನ್‌ಷನ್ ಹೇಮಾವತಿಯಲ್ಲಿ ನಡೆದಂತಹ ವ್ಯವಹಾರದ ಬಗ್ಗೆ, ಅಥವಾ ಹೇಮಾವತಿಯಲ್ಲಿ ಪೀಸ್ ವರ್ಕ್‌ನಲ್ಲಿ ಕಂಟ್ರಾಕ್ಟರ್‌ಗಳು ಹಣ ಮಾಡಿಕೊಂಡಿದ್ದಾರೆ. ಅದಕ್ಕಾಗಿ ನಿಲ್ಲಿಸಬೇಕೆಂದು ಅವರ ಮನಸ್ಸು ಇತ್ತೆಂದು ನಾನು ಹೇಳುತ್ತೇನೆ. ಆದರೆ ಅಲ್ಲಿ ನಿಲ್ಲಿಸಬೇಕೆನ್ನುವವರು ಅಲ್ಲಿ ಏಕೆ ನಿಲ್ಲಿಸಿದರು. ಅಲ್ಲಿ ನಿಲ್ಲಿಸಿದ್ದು ಒಂದು ವರ್ಷವಾದರೂ ಕೂಡ ನಿಮ್ಮ ಗಮನಕ್ಕೆ ಏಕೆ ಬಂದಿಲ್ಲ. ಅಲ್ಲಿ ಜನ ಬೊಬ್ಬೆ ಹಾಕುತ್ತಿದ್ದರು. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ನಿಲ್ಲಿಸಬೇಡಿ ಯಾವುದೇ ರೀತಿಯಿಂದ ಆ ಲ್ಯಾಂಡ್ ಲಾರ್ಡ್ ಜೊತೆಯಲ್ಲಿ ನಾವು ಕನ್‌ಸೆಂಟ್ ತೆಗೆದುಕೊಂಡು ನಾವು ಜಮೀನು ತೆಗೆದುಕೊಂಡಿದ್ದೇವೆ ಕೆಲಸ ಮಾಡಬೇಕೆಂದು ಅವರೆಲ್ಲಾ ಗೋಳಾಡಿದರೂ ಕೂಡ ಈ ಸರಕಾರ ಕೇಳಲಿಲ್ಲ. ಒಂದು ವರ್ಷ ಕೆಲಸ ನಿಲ್ಲಿಸಿದಿರಿ. ಕೊನೆಗೆ ನಾವು ಎಂದಿಗೂ ಕೂಡ ಕೆಲಸ ನಿಲ್ಲಿಸಿ ಎಂದು ಹೇಳಲಿಲ್ಲ, ಆದರೆ ಅಲ್ಲಿರತಕ್ಕ ಒಬ್ಬ ಅಧಿಕಾರಿ ನಾವು

ಇಷ್ಟೂ ಮಾಡಿದಂತಹ ಜಿ.ಒ. ಅನ್ನು ಮಿಸ್ ಇಂಟರ್‌ಪ್ರಿಟ್ ಮಾಡಿ, ನಾನು ಹೇಳಿದ್ದುದು ಹೇಮಾವತಿಗೆ, ಆ ಜಿ.ಒ. ಇರತಕ್ಕಂಥಾದ್ದು ಪೀಸ್ ಕಂಟ್ರಾಕ್ಟ್ ನಿಲ್ಲಿಸಿ ಎಂದು ಹೇಳಿದ್ದು, ಕೇವಲ ಹೇಮಾವತಿ ಕೆನಾಲ್‌ಗೆ ಸಂಬಂಧಪಟ್ಟಂತೆ. ಆದರೆ ಅವರು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಅನ್ನು ಕೂಡ ನಿಲ್ಲಿಸಿದರು ಎನ್ನುವುದು ಇವತ್ತು ಹೊರಗೆ ಬರುತ್ತಿದೆ. ಅಂದರೆ ಅದು ತಿಳಿದುಕೊಳ್ಳುವುದಕ್ಕೆ ಒಂದು ವರ್ಷ ಬೇಕೇ? ಒಂದು ವೇಳೆ ಆ ಅಧಿಕಾರಿ ತಪ್ಪು ದಾರಿಗೆ ಎಳೆದಿದ್ದರೆ ಆ ಅಧಿಕಾರಿ ರಾಂಗ್ ಇಂಟರ್‌ಪ್ರಿಟ್ ಮಾಡಿ 6 ತಿಂಗಳವರೆಗೆ ನಿಮ್ಮ ಗಮನಕ್ಕೆ ತರಲಿಲ್ಲವೆಂದರೆ, ಆತನ ಮೇಲೆ ನೀವೇಕೆ ಕ್ರಮ ತೆಗೆದುಕೊಳ್ಳಲಿಲ್ಲ. Take action against him if he is responsible. Take action against that officer. If you are responsible, own it. ನನ್ನ ತಪ್ಪಿನಿಂದಾಗಿದೆ ಜನ ಕ್ಷಮಿಸಿ ಎಂದು ಕೇಳಿ, ಅದನ್ನು ಬಿಟ್ಟು ನಿಮ್ಮನ್ನು ಕೇಳಿದಾಗ ಅಧಿಕಾರಿಗಳ ಮೇಲೆ ಹಾಕುವುದು, ಅಧಿಕಾರಿಗಳನ್ನು ಕೇಳಿದಾಗ ಸಾರ್ ಅವರು ಮೊದಲು ಜಿ.ಒ. ಇಷ್ಟೂ ಮಾಡಿದ್ದರು ಇದರಲ್ಲಿ ಮಿಸ್ ಯೂಸ್ ಆಗುತ್ತದೆ, ಆ ಪೀಸ್ ವರ್ಕ್‌ನಲ್ಲಿ ಬಹಳ ಹಣ ಹೊಡೆಯುತ್ತಿದ್ದಾರೆ, ತಮಗೆ ಬೇಕಾದ ಕಂಟ್ರಾಕ್ಟರ್ ಲೂಟಿ ಮಾಡುತ್ತಿದ್ದಾರೆ, ಕ್ಲಾಸಿಫಿಕೇಷನ್ ಅನ್ನು ಬದಲಾವಣೆ ಮಾಡಿದ್ದಾರೆ. ಮಣ್ಣು ಇದ್ದಲ್ಲಿ, ಕಲ್ಲು ಕಲ್ಲು ಇದ್ದಲ್ಲಿ, ರಾಕ್ ಇದ್ದಲ್ಲಿ, ಇನ್ನೊಂದು ಸಾಫ್ಟ್, ಸಾಫ್ಟ್ ಅನ್ನು ಹಾರ್ಡ್ ಮಾಡುವುದು ಇವೆಲ್ಲಾ ನಡೆದಿದೆ. ಅದಕ್ಕೋಸ್ಕರ ನಿಲ್ಲಿಸಿದ್ದೇವೆಂದು ಹೇಳತಕ್ಕಂತಹವರು, ಈ ಅಪ್ಪರ್ ಕೃಷ್ಣಾ ಬಗ್ಗೆ ಏಕೆ ನೀವು ಚಿಂತನೆ ಮಾಡಲಿಲ್ಲ? ಅದೇ ಆದೇಶವನ್ನು 3 ತಿಂಗಳ ಮೇಲೆ ಕೊಟ್ಟಿರಿ. 3 ತಿಂಗಳಲ್ಲಿ ಕೊಡತಕ್ಕಂತಹ, ಕೆಲಸ ಮಾಡಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲವೇ ಸಂಬಂಧಪಟ್ಟ ಮಂತ್ರಿಗಳು ಕೇಳಿದರೆ ಹೇಳುತ್ತೇನೆ. ನಿಮಗೆ ಎಲ್ಲೋ ಒಂದು ಕಡೆ ಸಂಶಯ ಇದ್ದರೆ ಆ ನಿಮ್ಮ ವಿಚಾರಣೆ ಅಷ್ಟಕ್ಕೆ ಸೀಮಿತವಾಗಿ ಇರಬೇಕು. ನನಗೆ ಗೊತ್ತು, ಎಲ್ಲಿ ಏನು ಮಾಡಿದ್ದಾರೆ ಮುಖ್ಯ ಮಂತ್ರಿಗಳು ನನ್ನ ಜೊತೆಯಲ್ಲಿ ಮಾತನಾಡಿದ್ದಾರೆ ಅದನ್ನು ಹೇಳಲೇನು? ಹೋಗಲಿ ಬಿಡಿ ಎಂದು ಸುಮ್ಮನೆ ಕುಳಿತರೆ ಅದನ್ನು ನೀವು ಕೇಳುವುದಕ್ಕೆ ಹೋಗಬೇಡಿ. ನೀವು ಕೋಟ್ಯಾಂತರ ರೂಪಾಯಿ ಉಳಿಸಿದ್ದೇವೆಂದು ಹೇಳಬಹುದು, ನೀವು ಕೋಟ್ಯಾಂತರ ರೂಪಾಯಿಗಳನ್ನು ಉಳಿಸಿದ್ದರೆ ಅದೇ ಆದೇಶವೇಕೆ ಕೊಟ್ಟಿರಿ. ಎರಡು ಸಾವಿರ ವರ್ಷದ ಒಳಗೆ ಕೆಲಸ ಮುಗಿಯಲಿ ಎಂಬ ಹಠ ಛಲ ಇದೆ ಎಂದು ಫಾಸ್ಟಾಗಿ ಕೆಲಸವಾಗಲಿ ಎಂದು ಕೆಲಸ ಪ್ರಾರಂಭ ಮಾಡಿದ್ದಾರೆ. ಇದನ್ನು ಒಂದು ಕಡೆ ಮಾಡಿದಿರಿ ಅವರು ಹೇಳುವುದನ್ನು ನಾನೇ ಹೇಳುತ್ತಿದ್ದೇನೆ. ಅಲ್ಲೇನು ಮನಸ್ಸು ಮಾಡಿದಿರಿ ಈ ಪೀಸ್ ವರ್ಕ್ ಅನ್ನು ಏಕೆ ಪುನಃ ಕೊಟ್ಟರು ಅಂದರೆ ಅದೇ ಕಂಟ್ರಾಕ್ಟರುಗಳನ್ನು ಕರೆದು ನೋಡಿ ಈ ರೇಟ್ ಹೆಚ್ಚಿಗೆ ಆಗಿದೆ ನೀವೇನೋ 20 ಪರ್ಸೆಂಟ್ ಹತ್ತು ಪರ್ಸೆಂಟ್ ಕಡಿಮೆ ಮಾಡಿ ಮತ್ತೆ ನೀವೇ ತೆಗೆದುಕೊಳ್ಳಿ ಎಂದು ಕೊಟ್ಟಿರಿ. ಆಗ 20 ಪರ್ಸೆಂಟ್ ಮೇಲೆ ಮಾಡುತ್ತೇವೆಂಬ ಭಾವನೆಯನ್ನು ತಾಳಿಕೊಂಡು ಕೊಟ್ಟಿರಿ. ಈಗ 15 ಪರ್ಸೆಂಟ್‌ನಲ್ಲಿ ಮಾಡುತ್ತಾರೆ. ಮುಂದೆ ನೋಡೋಣ ಕ್ಲೈಮ್ ಮಾಡುವಾಗ ಏನಾಗುತ್ತದೆಂದು. ಮಾನ್ಯ ಜಾಲಪ್ಪನವರೇ ಮುಂದೆ ಹೀಗೆ ಬರಬಹುದು. ಮುಂದೆ ಈ ಅರ್ಬಿಟ್ರೇಷನ್ ಆಗಲೀ ಅಥವಾ ಎಸ್ಕಲೇಷನ್ ಆಗಲೀ ಕೊನೆಗೆ ಫೈನಲ್ ಕ್ಲೇಮ್ಸ್ ಹಾಕುತ್ತಾರಲ್ಲಾ ಆಗ ಎಷ್ಟರ ಮಟ್ಟಿಗೆ ಹಿಡಿದಿಡುತ್ತೀರಿ ಅದೂ ಬರುತ್ತದೆ. ಟೆಂಡರ್ ಪ್ರಕಾರ ಹಾಕಿದರೂ ಕೂಡ ರೇಟ್ ಫಿಕ್ಸೇಷನ್ ವೇರಿಯಸ್ ಪ್ಲೇಸ್‌ನಲ್ಲಿ ಮಾಡಿಕೊಳ್ಳುತ್ತಾರೆ. ಒಂದು

ಹತ್ತು ಕಿಲೋ ಮೀಟರ್ ಅವನೇ ಆ ಕೆಲಸ ತೆಗೆದುಕೊಂಡರೆ, 2 ಕಿಲೋ ಮೀಟರಿಗೆ ಒಂದು ರೇಟ್ ಇದ್ದರೆ, 3ನೇ ಕಿಲೋ ಮೀಟರಿಗೆ ಇನ್ನೊಂದು ರೇಟ್ ಹಾಕುತ್ತಾರೆ. ಏನು ಕ್ಲಾಸಿಫಿಕೇಷನ್‌ನಲ್ಲಿ ಮಾಡಿ ಕೊಟ್ಟಿದ್ದಿರಿ ಏನು ರೇಟ್ ಹಾಕಿಕೊಟ್ಟಿದ್ದಿರಿ, ಇಲ್ಲಿ ನೋಡಿದರೆ ಫಿಸಿಕಲ್ ಟಾರ್ಗೆಟ್ ಆಚೀವ್ ಮಾಡುವಾಗ ಇಲ್ಲವೇ ಫಿಸಿಕಲೀ ಕೆಲಸ ಮಾಡುವಾಗ ಇಲ್ಲಿ ವ್ಯತ್ಯಾಸ ಇದೆ. ಇಲ್ಲಿ ಸಾಫ್ಟ್ ರೇಟ್ ನೀವು ಹಾಕಿಕೊಟ್ಟಿದ್ದಿರಿ ಇಲ್ಲಿ ಹಾರ್ಡ್ ರಾಕ್ ಬಂದಿದೆ ಅದಕ್ಕೆ ಬದಲಾವಣೆ ಮಾಡಿ ಎಂದು ನಿಮ್ಮ ಮೇಲೇ ಮತ್ತೆ ಬರುತ್ತಾನೆ. ಆಗ ನಿಮ್ಮ ಅನುಭವದ ಆಧಾರದ ಮೇಲೆ ಇರಿಗೇಷನ್ ಮಿನಿಸ್ಟರ್ ಆಗಿ 7 ವರ್ಷವೇನು ಕೆಲಸ ಮಾಡಿದ್ದಿರಿ ಅದರ ಆಧಾರದ ಮೇಲೆ ಅಥವಾ ಹಿಂದೆ ತಾವು ಅನೇಕ ಸಾರಿ ನೀರಾವರಿ ಯೋಜನೆಗಳ ಮೇಲೆ ಮಾತನಾಡಿ ನೋಡಿ ಅದರ ಅನುಭವ ಪಟ್ಟಿದ್ದೀರಲ್ಲ. ಅದರ ಆಧಾರದ ಮೇಲೆ ಅವರ ಕ್ಲೇಮ್ಸ್ ಅನ್ನು ನೀವು ಸೆಟಲ್ ಮಾಡುತ್ತೀರಿ ಇದನ್ನು ನಾವು ಹೇಳಬೇಕಾಗಿಲ್ಲ. ಈಗ ತೋರಿಕೆಗೆ ಅದು ಇದ್ದರೂ ಕೂಡ ಒಳಗಡೆ ಏನು ಬರುತ್ತದೋ ಆಮೇಲೆ ಏನಾಗುತ್ತದೋ ಅದನ್ನು ನೋಡೋಣ. ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನಲ್ಲಿ ಪುನಃ ಅದೇ ರೇಟಿನ ಮೇಲೆ ಕೆಲಸ ಪ್ರಾರಂಭವಾಗಿದೆ. ಅದಕ್ಕಾಗಿ ನಾನು ಕೇಳತಕ್ಕಂಥಾದ್ದು ಇಷ್ಟೆ. ತಾವು ತರಾತುರಿಯಲ್ಲಿ ಏನು ನಿರ್ಣಯ ತೆಗೆದುಕೊಂಡಿರಿ ಅದನ್ನು ಸ್ಟಾಪ್ ಮಾಡಿ. ಇದರ ರಿಪರ್‌ಕೇಷನ್ ಅಪ್ಪರ್ ಕೃಷ್ಣಾಗೆ ಆಗುತ್ತದೋ ಘಟಪ್ರಭಾಕ್ಕೆ ಆಗುತ್ತದೆಯೋ, ಮಲಪ್ರಭಾಕ್ಕೆ ಆಗುತ್ತದೆಯೋ, ಮುಲ್ಲಾ ಮಾರಿಗೆ ಆಗುತ್ತದೆಯೋ, ಹಿಪ್ಪರಗಿ ಬ್ಯಾರೇಜಿಗೆ ಆಗುತ್ತದೆಯೋ, ಇದನ್ನು ಯೋಚನೆ ಮಾಡದೆ ಏಕೆ ನೀವು ಮಾಡಿದಿರಿ? ಮಾಡುವುದು ಮಾಡಿದಿರಿ ತಿಂಗಳೋ ಆರು ತಿಂಗಳಲ್ಲಾದರೂ ನಿರ್ಣಯ ತೆಗೆದುಕೊಳ್ಳಬಹುದಿತ್ತು. 6-8 ತಿಂಗಳು ಮೂಲೆಗೆ ಬಿತ್ತು. 6-7 ತಿಂಗಳ ಮೇಲೆ ಎಲ್ಲರೂ ಹೇಳಿದ ಮೇಲೆ ಗಲಾಟೆ ಮಾಡಿದ ಮೇಲೆ ಪುನಃ ಅದೇ ಅಧಿಕಾರಿಗಳನ್ನು ಕರೆಯಿಸಿ ಪೀಸ್ ವರ್ಕ್ಸ್ ಮೇಲೆ ಕೆಲಸ ಪ್ರಾರಂಭ ಮಾಡಿದಿರಿ. ಅದಕ್ಕಾಗಿ ದಯವಿಟ್ಟು ಇನ್ನು ಮೇಲಾದರೂ ಇಂಥಾದ್ದು ಮಾಡುವುದಕ್ಕೆ ಹೋಗಬೇಡಿ. ಅಲ್ಲಿನ ಜನ ಮುಗ್ಧರಿದ್ದಾರೆ. ರೊಚ್ಚಿಗೆ ಏಳುವುದಿಲ್ಲ. ಕೇಳುವುದಿಲ್ಲ ಅಥವಾ ಈ ಕಡೆಯ ಹಾಗೆ ಎಜಿಟೇಷನ್ ಮಾಡುವುದಿಲ್ಲ. ನಾವು ಇಷ್ಟೆಲ್ಲಾ ಮಾಡಿಕೊಂಡಿದ್ದೇವೆ ನಿಮ್ಮ ಕಡೆಯ ಜನ ಎಂದೂ ಕೇಳಲೇ ಇಲ್ಲ ಏಕೆ ಸುಮ್ಮನಾದರು ಎಂದು ಮಾನ್ಯ ಯಡಿಯೂರಪ್ಪನವರು ಕೇಳುತ್ತಿದ್ದರು. ಸುಮ್ಮನೆ ಏತಕ್ಕೆ ಅವರು? ಎನ್ನತಕ್ಕಂಥ ಮಾತು ಅವರು ಆಡುತ್ತಿದ್ದರು. ಅಂದರೆ ಜನ ರೊಚ್ಚಿಗೆದ್ದ ಮೇಲೆ ಮಾಡಬೇಕು ಎನ್ನುತ್ತೀರೋ ಜನರು ಕೇಳಿದ ಮೇಲೆಯೇ ಮಾಡಬೇಕು ಎನ್ನುತ್ತೀರಾ? ಅದಕ್ಕಾಗಿ ಒಂದು ಪ್ರಾಮಾಣಿಕವಾಗಿ ಗುರಿಯನ್ನು ಇಟ್ಟುಕೊಂಡ ಮೇಲೆ ಅದು ಸಾಧನೆ ಮಾಡುವುದು ನಿಮ್ಮ ಕೆಲಸ. ಅದಕ್ಕೆ ನಿಮಗೇನಾದರೂ ಸ್ಥಳೀಯ ಮುಖಂಡರ ಸಹಾಯ ಬೇಕಾದರೆ ಅವರು ಕೊಡುತ್ತಾರೆ. ಆದರೆ ನೀವು ಯಾರ ಸಹಾಯವನ್ನು ಕೇಳುವದಕ್ಕೂ ತಯಾರಿಲ್ಲ. ಒಂದೇ ಒಂದು ಎಂದರೆ ನಿಮಗೆ ಏನು ತಿಳಿಯುತ್ತದೆಯೋ ತೋಚುತ್ತದೆಯೋ ಅದನ್ನೇ ಮಾಡುವುದು ಮತ್ತು ಅದಕ್ಕಾಗಿ ನೀವು ಇರತಕ್ಕಂಥದ್ದು ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಇನ್ನೊಂದು ವಿಚಾರ ನೀವು ಪರ್‌ಫಾರ್ಮೆನ್ಸ್ ಬಜೆಟನ್ನು ಕೊಟ್ಟಿದ್ದೀರಿ. ಇದು ಆಗಸ್ಟ್ 95ರಲ್ಲಿ ಅಂದರೆ ಸುಮಾರು ಹೆಚ್ಚು ಕಡಿಮೆ ಆರೇಳು ತಿಂಗಳ ಹಿಂದೆ ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಕೂಡ ಆಗ ಸಲಹೆ ಕೊಟ್ಟಿದ್ದರೂ ಇನ್ನೂ ಜಾರಿಯಲ್ಲಿ ತಂದಿಲ್ಲ. ಸಲಹೆ ಕೊಟ್ಟದ್ದು ಜಾರಿಯಲ್ಲಿ ತರುವುದಕ್ಕೆ ಇದಕ್ಕಿಂತಲೂ ಹೆಚ್ಚಿನ ಅವಕಾಶ

ಬೇಕಾಗಿಲ್ಲವಲ್ಲ. ಏನು ಸಲಹೆ ಎಂದರೆ ಅಲ್ಲಿನ ಚೀಫ್ ಇಂಜಿನಿಯರ್ಸ್ ಕೊಟ್ಟಿದ್ದಾರೆ. ಕೆಲಸ ತ್ವರಿತವಾಗಬೇಕಾದರೆ ಏನು ಮಾಡಬೇಕು? ಅವರು ಹೇಳಿದ್ದಾರೆ, ಇದೇ ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಮತ್ತು ಶಹಾಪುರ್ ಬ್ರಾಂಚ್ ಕೆನಾಲ್ ಬಗ್ಗೆ. "Completion of balance SBC Distributory 21 of Phase II; completion of MBC sluice 1, 2 & 3 - 0 to 39 kms., and all distributaries coming thereunder; construction of MBC 39 to 50 kms and all distributaries coming thereunder; construction of JBC from 0 to 40 kms. and all distributaries coming thereunder." ಹೀಗೆ ಅವರು ಸುಮಾರು ಐದು ಸಲಹೆಗಳನ್ನು ಕೊಟ್ಟಿದ್ದರು. ಇದನ್ನು ನೀವು ಮುಂದಿನ ವರ್ಷ ಎಪ್ರಿಲ್, ಮೇ, ಜೂನ್ ತಿಂಗಳಲ್ಲಿ ಕಡ್ಡಾಯವಾಗಿ ಮಾಡಬೇಕೆಂದು ಹೇಳಿದ್ದರು. ಆಗ ನಿಮ್ಮದೇ ಸರ್ಕಾರ ಇತ್ತು, ಇದನ್ನು ಇಂಪ್ಲಿಮೆಂಟ್ ಮಾಡಲಿಲ್ಲ. ಈಗ ಮೊನ್ನೆಯವರೆಗೆ ಸಬ್ಜೆಕ್ಟ್ ಕಮಿಟಿಯವರು ರೆವ್ಯೂ ಮಾಡುವವರೆಗೆ ಮತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿ ವತಿಯಿಂದಲೂ ಕೂಡ ರಿವ್ಯೂ ಮಾಡಿದಾಗ ಈ ಬಗ್ಗೆ ಕೇಳಿದಾಗ ಇನ್ನೂ ತನಕ ಸರ್ಕಾರ ಇದರ ಮೇಲೆ ಗಮನವನ್ನು ಹರಿಸಿಲ್ಲ ಎಂಬುದು ತಿಳಿಯಿತು. ಕೇಳಿದರೆ ಈಗಿಲ್ಲ, ಮುಂದೆ ಮಾಡುತ್ತೇವೆಂದು, ಅವರು ಇದೇ ನೆಪ ಹೇಳುತ್ತಾರೆ. ಮತ್ತು ಕೊನೆಗೆ ಎಲ್ಲಿಗೆ ಬರುತ್ತದೆ ಎಂದರೆ ಯಾವ ದಿಕ್ಕಿನಲ್ಲಿ ನಾವು ಕೆಲಸ ಮಾಡಬೇಕಾಗಿತ್ತು, ಅಲ್ಲಿ ನಮ್ಮ ಗುರಿಯನ್ನು ಸಾಧಿಸುವುದಕ್ಕೆ ನಮಗೆ ಆಗಲಿಲ್ಲ ಎಂದು ಹೇಳುತ್ತೀರಿ. ಇನ್ನೊಂದು ಈ ಇಂಡಿ ಬ್ರಾಂಚಿನಲ್ಲಿ 0 ಟು 65 ಕಿಲೋಮೀಟರ್‌ವರೆಗೆ ಈ ಕೆನಾಲ್‌ವೈಸ್ ಸುಮಾರು 60,696 ಹೆಕ್ಟೇರ್‌ಗೆ ನೀರು ಕೊಡತಕ್ಕಂಥ ಒಂದು ಯೋಜನೆ ಇದೆ. ಆದರೆ ಇವರೇನು ಮೂರು ತಿಂಗಳಲ್ಲಿ ಗುರಿಯನ್ನು ಸಾಧಿಸಬೇಕಾಗಿತ್ತು ಅಂದರೆ ಫಿಸಿಕಲ್ ಟಾರ್ಗೆಟ್ 0 ಟು 64ರಲ್ಲಿ ಇವರು ಸುಮಾರು 0 ಟು 38ರ ವರೆಗೆ ಈಗ ಸಂಪೂರ್ಣವಾಗಿ ಅದನ್ನು ಪೂರ್ಣಗೊಳಿಸಬೇಕಾಗಿತ್ತು. ಆದರೆ ಆ ಕೆಲಸ ಇನ್ನೂ 50 ಪರ್‌ಸೆಂಟ್ ಆಗಿಲ್ಲ. ಅದಕ್ಕೆ ಮತ್ತೆ, ಡಿಸೆಂಬರ್ ಎಂಡ್‌ವರೆಗೆ ಗುರಿ ಇಟ್ಟಿದ್ದಾರೆ. ಅಂದರೆ ಈ ರೀತಿಯಾಗಿ ಎಲ್ಲವನ್ನೂ ಕೂಡ ಎಕ್ಸ್‌ಟೆನ್ಷನ್ ಮಾಡಿಕೊಂಡು, ಒಂದಲ್ಲ ಒಂದು ನೆಪದಲ್ಲಿ ಇದನ್ನು ಮುಂದೆ ಹಾಕುವ ಒಂದು ಪ್ರಯತ್ನವನ್ನು ಮಾಡುತ್ತಿದ್ದಾರೆ. ಮೊನ್ನೆ ನಾರಾಯಣಪುರ್ ರೈಟ್ ಬ್ಯಾಂಕ್ ಕೆನಾಲ್ ಇದು ರಾಯಚೂರಿನಲ್ಲಿ ಬರುತ್ತದೆ. ಅದು ವಿಶೇಷವಾಗಿ ಲಲಿತಾನಾಯಕ್‌ರವರ ಕ್ಷೇತ್ರಕ್ಕೆ ಅನುಕೂಲವಾಗುವ ಕೆನಾಲ್. ಇದೂ ಕೂಡ 84 ಸಾವಿರ ಹೆಕ್ಟೇರ್ ಭೂಮಿಗೆ ಅನುಕೂಲವಾಗುವಂಥಾದ್ದು. ಸುಮಾರು 95 ಕಿಲೋ ಮೀಟರ್ ಹೋಗುವಂಥದ್ದು. ಈ ರೈಟ್ ಬ್ಯಾಂಕ್ 95 ಕಿಲೋಮೀಟರ್‌ನಲ್ಲಿ ಮೊನ್ನೆ ನಮ್ಮ ಸರ್ಕಾರ ಒಂದು ಸಾರಿ ಭೂಮಿ ಪೂಜೆ ಮಾಡಿತು, ಆಮೇಲೆ ಒಂದು ಸಾರಿ ಸ್ಮಾಲ್ ಕೆನಾಲ್ ಎಂದು ಅದಕ್ಕೊಂದು ಸಾರಿ ಉದ್ಘಾಟನೆಯಾಗಿ ಕೆಲಸ ಪ್ರಾರಂಭವಾಯಿತು. ಅದಾದಮೇಲೆ ಪುನಃ ಅದೇ ಕೆನಾಲ್‌ಗೆ ಪೂಜೆ ಮಾಡಿದ್ದನ್ನೇ ಪುನಃ ನಮ್ಮ ದೇವೇಗೌಡರು ಹೋಗಿ ಅವರೊಂದು ಫೌಂಡೇಶನ್ ಹಾಕಿದರು. ಅದಕ್ಕೆ ಟೋಟಲ್ ಆಗಿ ಐದು ಕೋಟಿ ರೂಪಾಯಿ ಮಾತ್ರ ಬಿಡುಗಡೆ ಮಾಡಿದರು. ಆ ಐದು ಕೋಟಿಯಲ್ಲಿ ಕೇವಲ 1 ಕೋಟಿ 70 ಲಕ್ಷ ಮಾತ್ರ ಇವತ್ತಿನ ದಿವಸ ಅದಕ್ಕೆ ಎಕ್ಸ್‌ಪೆಂಡಿಚರ್ ಆಗಿದೆ. ಅಂದರೆ ಇದು ಪೂರ್ತಿ ಮುಗಿಯಬೇಕೆಂದರೆ ತಾವು ಲೆಕ್ಕ ಹಾಕಿದರು ಸುಮಾರು 157 ಕಿಲೋ ಮೀಟರ್ ಉದ್ದ ಇರುವ

ಕೆನಾಲ್. ಆಮೇಲೆ ಇದು 95 ಕಿಲೋ ಮೀಟರ್‌ಗೆ ಹಾಕಿರುವ ಒಂದು ಫೌಂಡೇಶನ್. ಇದಕ್ಕೆ ನಾವು 95 ಕಿಲೋ ಮೀಟರ್ ಇರುವ ಉದ್ದ ಕಾಲುವೆಗೆ ಏಕಕಾಲದಲ್ಲಿ ಪ್ರತಿಯೊಬ್ಬರಿಗೆ ಐದು ಕಿಲೋ ಮೀಟರ್, ಹತ್ತು ಕಿಲೋಮೀಟರ್ ಈ ವೇಗದಲ್ಲಿ ಹತ್ತೋ ಇಪ್ಪತ್ತೋ ಕಂಟ್ರಾಕ್ಟರ್‌ಗಳಿಗೆ ಕೊಟ್ಟು ಇದಕ್ಕೆ ಸಫಿಶಿಯಂಟ್ ಫಂಡ್ಸ್ ಕೊಟ್ಟು ಮೂರ್ನಾಲ್ಕು ವರ್ಷದಲ್ಲಿ ಮುಗಿಸಬೇಕು ಎಂದು ಹೇಳಿ ತೀರ್ಮಾನ ಮಾಡಿದರೆ ಇದು ಸಾಧ್ಯ ಇದೆ. ಇಲ್ಲದಿದ್ದರೆ ಸುಮ್ಮನೆ 95 ಕಿಲೋಮೀಟರ್ ಅಲ್ಲಿ ಪ್ರಾರಂಭ ಮಾಡಿಸಿ, ಅದಕ್ಕೆ ಹಣ ಕೊಡದೆ ನಾವು ಕಂಪ್ಲೀಟ್ ಮಾಡುತ್ತೇವೆ ಎಂದರೆ ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. ನಾರಾಯಣಪುರ ರೈಟ್ ಬ್ಯಾಂಕ್ ಕೆನಾಲ್ ಇರಲಿ, ಅಥವಾ ಆಲಮಟ್ಟಿ ಲಿಫ್ಟ್ ಇರಿಗೇಷನ್ ಇರಲಿ, ಅಥವಾ ಆಲಮಟ್ಟಿ ಡ್ಯಾಮನ್ನು 524 ಮೀಟರ್ ಎತ್ತರ ಮಾಡುವುದೇ ಆಗಲೀ, ಈ ರಿಹ್ಯಾಬಿಲಿಟೇಷನ್ ಪ್ರೊಗ್ರಾಮ್ ಕಂಪ್ಲೀಟ್ ಆಗುವವರೆಗೆ ಅದೂ ಆಗುವುದಿಲ್ಲ. ಹಣ ಕೊಡುವವರೆಗೆ ಕೆನಾಲ್ ಕೆಲಸ ಆಗುವುದಿಲ್ಲ ಈ ಕೆನಾಲ್‌ಗೆ ಬೇಕಾದಂಥ ಲ್ಯಾಂಡ್ ಅಕ್ವಿಜಿಷನ್ ಪ್ರೊಸಿಡಿಂಗ್ಸ್ ಬಗ್ಗೆ ಕೂಡ ನಾವು ಯಾವ ರೀತಿಯಾಗಿ ಬಾಗಲಕೋಟೆಯಲ್ಲಿರುವ ಅಧಿಕಾರಿಗೆ ಸಂಪೂರ್ಣವಾದಂಥ ಅಧಿಕಾರವನ್ನು ಕೊಟ್ಟಿದ್ದೇವೋ, ಅದೇ ರೀತಿಯಾಗಿ ಲ್ಯಾಂಡ್ ಅಕ್ವಿಜಿಷನ್ ಆಫೀಸರ್‌ಗಳಿಗೂ ಕೂಡ ಸಂಪೂರ್ಣವಾದ ಅಧಿಕಾರ ಕೊಡಬೇಕು. ಇಲ್ಲದಿದ್ದರೆ ಭೀಮನಾರಾಯನಗುಡಿಯಲ್ಲಿರುವ ಅಡ್ಮಿನಿಸ್ಟ್ರೇಟರ್‌ಗೆ ಸಂಪೂರ್ಣವಾದ ಸೆಕ್ರೇಟರಿ ಪವರ್ಸ್ ಅವರಿಗೆ ಕೊಟ್ಟರೆ ಖಂಡಿತವಾಗಿಯೂ ಈ ಭಾಗದಲ್ಲಿರುವ ಜೀವರ್ಗಿ ಕೆನಾಲ್ ಇರಬಹುದು, ಇಂಡಿ ಬ್ರಾಂಚ್ ಕೆನಾಲ್ ಇರಬಹುದು, ಅಥವಾ ಎಸ್. ಬಿ. ಸಿ. ಕೆನಾಲ್ ಇರಬಹುದು ಅಥವಾ ನಾರಾಯಣಪುರ ರೈಟ್ ಬ್ಯಾಂಕ್ ಕೆನಾಲ್ ಇರಬಹುದು, ಇದಕ್ಕೆ ಉಪಯೋಗವಾಗುತ್ತದೆ. ಇಲ್ಲದಿದ್ದರೆ ನಾವು ಪುನಃ ಲ್ಯಾಂಡ್ ಅಕ್ವಿಜಿಷನ್‌ಗೋಸ್ಕರ ಅಡ್ಡಾಡಬೇಕಾಗುತ್ತದೆ. ಲ್ಯಾಂಡ್ ಓನರ್‌ಗಳಿಗೆ ನಾವು ರುಷವತ್ತು ಕೊಟ್ಟು ಲಂಚ ಕೊಟ್ಟು ಅನೇಕ ಸಾರಿ ಏನಾಗುತ್ತದೆ ಅಂದರೆ ಈ ಕಂಟ್ರಾಕ್ಟರೇ ಅವರಿಗೆ ದುಡ್ಡು ಕೊಟ್ಟು ಅವರಿಂದ ಜಮೀನು ತೆಗೆದಿದ್ದಾನೆ. ಆಮೇಲೆ ಇವರಿಗೆ ಬಂದು ಹೇಳುತ್ತಾರೆ, ಇವನ ಹತ್ತಿರ ನಾನು ಬರೆಯಿಸಿಕೊಂಡಿದ್ದೇನೆ, ಈ ಕೆಲಸ ನನಗೆ ಕೊಡಿ ಎನ್ನುತ್ತಾನೆ. ಇವರು ಅಕ್ಸೆಪ್ಟ್ ಮಾಡಿಕೊಡುವುದಿಲ್ಲ. ಆ ಕಂಟ್ರಾಕ್ಟರ್ ಕೆಲಸ ಬೇಕಾದವನು ಹುಡುಕಿಕೊಂಡು ಹೋಗಬೇಕು. ಹುಡುಕಿಕೊಂಡು ಹೋಗಿ ಅವನೇನು ಮಾಡುತ್ತಾನೆ ಎಂದರೆ ನೀನು ಅಕ್ವಿಜಿಷನ್‌ನಲ್ಲಿ ಏನು ದುಡ್ಡು ಸಿಗಬೇಕೋ ಸಿಗುತ್ತದೆ, ತೆಗೆದುಕೊಳ್ಳಿ. ಸದ್ಯಕ್ಕೆ ನನಗೆ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಅಡ್ವಾನ್ಸ್ ಕೊಟ್ಟು, ಅವನಿಂದ ಕನ್‌ಸೆಂಟ್ ಬರೆಸಿಕೊಂಡು ಬಂದು ಚೀಫ್ ಇಂಜಿನಿಯರ್‌ಗೆ ಹೇಳಿದ ಮೇಲೆ, ಚೀಫ್ ಇಂಜಿನಿಯರ್ ಅವನಿಗೆ ವರ್ಕ್ ಆರ್ಡರ್ ಮಾಡುತ್ತಾನೆ. ಹೀಗಾಗಿ ಏನಾಗುತ್ತಿದೆ ಎಂದರೆ ಕೆಲವು ಕಡೆ ವೆಸ್ಟೆಡ್ ಇಂಟರೆಸ್ಟ್ ಕ್ಲಾಸ್‌ನವರು ಈ ಕೆಲಸವನ್ನು ತೆಗೆದುಕೊಂಡಿದ್ದಾರೆ. ಅವರು ನಾಳೆ ಕೆಲಸ ಮಾಡುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಇನ್ನೊಂದು ಭಯ ನನಗೇನು ಬರುತ್ತಿದೆ, ಅದನ್ನು ಸ್ಪಷ್ಟಪಡಿಸುತ್ತೇನೆ. ಈಗಾಗಲೇ ಚಂದ್ರಬಾಬು ನಾಯ್ಡು ಹೇಳಿದ್ದಾರೆ, ನನಗೆ ಶ್ರೀ ಶೈಲಂ ಡ್ಯಾಮ್‌ಗೆ ನೀರಿಲ್ಲ. ನಾಗಾರ್ಜುನ ಡ್ಯಾಮ್‌ಗೆ ಕೂಡ ನೀರು ಬರುತ್ತಿಲ್ಲ. ನಾಳೆ 524 ಎತ್ತರವಾದಂಥ ಆಲಮಟ್ಟಿ ಡ್ಯಾಮ್ ಬಂದರೆ ತೊಂದರೆಯಾಗುತ್ತದೆ, ಅದಕ್ಕೆ ನಾನು ಸುಪ್ರೀಂ ಕೋರ್ಟ್‌ಗೆ ಹೋಗುತ್ತೇನೆ ಎಂದು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಆ ಮುಖ್ಯ ಮಂತ್ರಿಗಳು ಎಲ್ಲಿಯವರೆಗೆ ಹೋಗಿದ್ದಾರೆ ಅಂದರೆ ಪ್ರಧಾನ

ಮಂತ್ರಿಗಳ ಮೇಲೆ ದೂರಿದ್ದಾರೆ. ಅಲ್ಲಿ ಇರುವ ಇರಿಗೇಷನ್ ಮಿನಿಸ್ಟರ್‌ಗೆ ಹೇಳಿದ್ದಾರೆ. ಇವರೆಲ್ಲರೂ ಆಂಧ್ರದವರು ಇದ್ದರೂ ನನಗೆ ಸಹಾಯ ಮಾಡುತ್ತಿಲ್ಲ. ಅಲ್ಲಿ ಕರ್ನಾಟಕದವರು ಈಗಾಗಲೇ ಆಲಮಟ್ಟಿ ಡ್ಯಾಮನ್ನು ಎತ್ತರ ಮಾಡುವ ನಿರ್ಣಯವನ್ನು ತೆಗೆದುಕೊಂಡು ನಮಗೆ ತೊಂದರೆ ಮಾಡುತ್ತಿದ್ದಾರೆ. ನಾನು ನ್ಯಾಯಕ್ಕೋಸ್ಕರ ಸುಪ್ರೀಂ ಕೋರ್ಟಿಗೆ ಹೋಗುತ್ತೇನೆ ಮತ್ತು ಜುರಾಲಾ ಪ್ರಾಜೆಕ್ಟ್ ಬಗ್ಗೆ ಕೂಡ ಹೇಳಿದ್ದಾರೆ. ಏಕೆಂದರೆ ನಮ್ಮ ಲ್ಯಾಂಡ್ ಸಬ್ ಮರ್ಜ್ ಆಗುತ್ತಿದೆ. ನಮ್ಮದು ಗುಡಿಗಳು ಹೋಗುತ್ತಿದೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು 19 ಕೋಟಿ ರೂಪಾಯಿಯನ್ನು ಕೊಡುತ್ತೇವೆ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಆದರೆ ಒಂದು ಪೈಸೆಯೂ ಬಿಡುಗಡೆ ಆಗಿಲ್ಲ. ಅವರು ಹೇಳಿರಬಹುದು. ಆದರೆ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಬೇಕಲ್ಲ. ನಾನು ಅಲ್ಲಿರತಕ್ಕಂತಹ, ಇರಿಗೇಷನ್ ಡಿಪಾರ್ಟ್‌ಮೆಂಟಿನವರಿಂದ ಮಾಹಿತಿ ಕೇಳಿಕೊಂಡಾಗ ಏನು 19 ಕೋಟಿ ರೂಪಾಯಿ ಜುರಾಲಾ ಪ್ರಾಜೆಕ್ಟ್ಸ ಸಬ್ ಮರ್ಜ್ ಏರಿಯಾಕ್ಕೆ ಮಾಡಬೇಕಿತ್ತು, ಅವರು ಮಾಡಿಲ್ಲ ಎನ್ನುವುದು ತಿಳಿಯಿತು. ಕೇವಲ ಟೋಕನ್ ಆಗಿ ಎರಡು ಕೋಟಿ ರೂಪಾಯಿ ಮಾತ್ರ ಇಟ್ಟಿದ್ದಾರೆ. ಅಂದಾಗ ನಮಗೆ 19 ಕೋಟಿ ರೂಪಾಯಿ ಯಾವಾಗ ಸಿಗುತ್ತದೆ? ಓವರ್ ಬ್ರಿಜ್ ಎಲ್ಲಿ ಆಗುತ್ತದೆ? ರಸ್ತೆ ಎಲ್ಲಿ ಆಗುತ್ತದೆ? ಮತ್ತು ದತ್ತಾತ್ರೇಯ ಗುಡಿ ಆಗಲಿ ಮತ್ತು ನಾರಾಯಣ ಟೆಂಪಲ್ ಇವೆರಡಕ್ಕೂ ಕೂಡ ಪ್ರೊಟೆಕ್ಷನ್ ವಾಲ್ ಕಟ್ಟತಕ್ಕದು ಆಗಲಿ ಈ ಕೆಲಸಗಳು ಆಗುವುದಿಲ್ಲ ಎನ್ನತಕ್ಕ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಇವರಿಗೆ 19 ಕೋಟಿ ಈ ಮೂರ್ನಾಲ್ಕು ತಿಂಗಳಲ್ಲಿ ಅವರು ಕೊಡುವುದಕ್ಕೆ ಸಾಧ್ಯತೆ ಇಲ್ಲ. ಇದು ಬರೀ ಅವರ ಇವರ ಮಾತುಕತೆ ಅಷ್ಟೇ ಹೊರತಾಗಿ ಬಜೆಟ್ ಪ್ರಾವಿಷನ್ ಎಲ್ಲೂ ಕೂಡ ಆಗಿಲ್ಲ. ಯಾವ ರೀತಿ ತೆಗೆದುಕೊಳ್ಳುತ್ತಾರೆ? ಯಾವ ರೀತಿ ಅವರು ಕೊಡುತ್ತಾರೆ ಎನ್ನತಕ್ಕದ್ದು ನಮಗಂತೂ ಅರ್ಥ ಆಗುತ್ತಿಲ್ಲ. ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸಬೇಕು, ಇದು ಒಂದು. ಇನ್ನೊಂದು ವಿಚಾರ ಮಾನ್ಯ ಚಂದ್ರ ಬಾಬು ನಾಯ್ಡು ಅವರ ಹೆದರಿಕೆ ಒಂದು ಕಡೆ. ಇನ್ನೊಂದು ಏನು ಆಗಿದೆ: ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಮತ್ತು ಎಲ್ಲಾ ಮೈನರ್ ಮತ್ತು ಮೀಡಿಯಮ್ ಇರಿಗೇಷನ್ ಪ್ರಾಜೆಕ್ಟ್, ಕೃಷ್ಣಾ ಬೇಸಿನ್‌ನಲ್ಲಿರತಕ್ಕ 90 ಪರ್ಸೆಂಟ್ ಕಂಟ್ರಾಕ್ಟರ್ಸ್ ಇವತ್ತು ಆಂಧ್ರದಿಂದ ಬಂದವರು. ಎರಡೂ ಸಾವಿರ ಇಸವಿಯವರೆಗೆ ತಮ್ಮ ಕೆಲಸಗಳು ಒಂದಲ್ಲಾ ಒಂದು ಕ್ಲೈಮ್ ಹಾಕಿಕೊಂಡು ಕೋರ್ಟಿನಲ್ಲಿ ಅಥವಾ ಆರ್ಬಿಟ್ರೇಟರ್ ಹತ್ತಿರ, ಎಲ್ಲೆಲ್ಲಿ ಯಾವ್ಯಾವ ಹಂತದಲ್ಲಿ ನಿಲ್ಲಿಸಬೇಕೋ ನಿಲ್ಲಿಸಬಹುದು. ಟೆಕ್ನಿಕಲ್ ಗ್ರೌಂಡ್‌ನಲ್ಲಿ ನಿಲ್ಲಿಸಬಹುದು, ಆಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಇಲ್ಲ ಎಂದು ನಿಲ್ಲಿಸಬಹುದು. ಅವರಿಗೆ ಫೇವರ್ ಮಾಡಿಲ್ಲವೆಂದು ಹೇಳಿ ನಿಲ್ಲಿಸಬಹುದು. ಹಣ ಕೊಟ್ಟಿಲ್ಲವೆಂದು ನಿಲ್ಲಿಸಬಹುದು. ಅನೇಕ ಸಾರಿ ಏನಾಗುತ್ತದೆ ಎಂದರೆ ನಮ್ಮ ಎಲ್.ಓ.ಸಿ. ಹೋಗುವುದು ನಿಧಾನ ಆಗುತ್ತದೆ. ನಿಧಾನ ಆದಾಗ ನಿಮ್ಮ ಎಲ್.ಓ.ಸಿ. ಕೊಟ್ಟಿಲ್ಲ, ಅದಕ್ಕೆ ನಾವು ಮುಂದೆ ಕೆಲಸ ಮಾಡುವುದಿಲ್ಲ ಎಂದು ನಿಲ್ಲಿಸಬಹುದು. ಅದಕ್ಕೆ ನಾನು ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳತಕ್ಕದ್ದು. ಕಣ್ಣಲ್ಲಿ ಕಣ್ಣಿಟ್ಟು ಕಂಟ್ರಾಕ್ಟರ್‌ಗೆ ನೀವು ಟೆಂಡರ್ ಕಾಲ್‌ಫಾರ್ ಮಾಡಿ ಕೊಟ್ಟಿರಬಹುದು, ಇಲ್ಲವೆಂದು ಹೇಳುವುದಿಲ್ಲ. ರೂಲ್ಸ್ ಪ್ರಕಾರ ಅವರು ತೆಗೆದುಕೊಂಡಿರಬಹುದು. ಆದರೆ ನನಗೆ ಭಯ ಏನು ಇದೆ, ನಾಳೆ ಈ ಪ್ರಾಜೆಕ್ಟ್‌ಗೆ ಧಕ್ಕೆ ಮಾಡತಕ್ಕ ಕೆಲವು ಕುತಂತ್ರ ಕೂಡ ಆ ಕಂಟ್ರಾಕ್ಟರ್‌ಗಳಿಂದ ಆಗಬಹುದು. ಯಾವಾಗ ನಾವು ಇನ್ನೂ ನ್ಯಾಯವಾಗಿ

ಆಲ್ಮಟ್ಟಿ ಡ್ಯಾಮನ್ನು ಎತ್ತರಿಸಿಕೊಳ್ಳಬೇಕು ಎನ್ನತಕ್ಕ ಪ್ರಯತ್ನ ಮಾಡಿದರೆ ಇವರು ಸುಪ್ರೀಂ ಕೋರ್ಟಿನ ಹೆದರಿಕೆಯನ್ನು ಈಗಲೇ ತೋರಿಸುತ್ತಿದ್ದಾರೆ. ಆಂದಾಗ ಅಲ್ಲಿ ಕೆಲಸ ಮಾಡತಕ್ಕವರು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಾರೋ ಎನ್ನತಕ್ಕ ಭಯ ಈ ಸ್ಟೇಟ್‌ಮೆಂಟ್ ಬಂದ ಮೇಲೆ ನನಗೆ ಬರುತ್ತಾ ಇದೆ. ಏಕೆಂದರೆ ನಾವು ಸುಮ್ಮನೇ ಯಾರ ಮೇಲೂ ಕೂಡ ಸಂಶಯ ಪಡತಕ್ಕದ್ದು ಅಲ್ಲ. ಅದು ಒಳ್ಳೆಯದೂ ಅಲ್ಲ. ಏಕೆಂದರೆ ನಮ್ಮ ಕಂಟ್ರಾಕ್ಟರ್ ಕರ್ನಾಟಕದವರು ಬೇರೆ ಕಡೆ ಹೋಗಿ ಕೆಲಸ ಮಾಡುತ್ತಾರೆ, ಅವರು ಬಂದು ನಮ್ಮ ಕಡೇನೂ ಕೆಲಸ ಮಾಡಬಹುದು, ತಮಿಳುನಾಡಿನವರು ಬಂದು ಮಾಡಬಹುದು . ಸುಮ್ಮನೆ ಎಲ್ಲರ ಮೇಲೂ ಅಸ್ಪರ್ಷನ್ಸ್ ಕ್ಯಾಸ್ಟ್ ಮಾಡತಕ್ಕದ್ದು ಅಲ್ಲ. ಆದರೆ.

ಛೇರ್ಮನ್:- ರೆವಿನ್ಯೂ ಮಿನಿಸ್ಟರ್ ಅವರು ಏನೋ ಹೇಳುತ್ತಾರೆ.

ಶ್ರೀ ಆರ್.ಎಲ್.ಜಾಲಪ್ಪ:- ಮಾನ್ಯ ಅಧ್ಯಕ್ಷರೇ, ಇದು ಪತ್ರಿಕೆಗೆ ಹೋಗುತ್ತದೆ. ಅಷ್ಟು ಮಾತ್ರ ತೆಗೆಸುವುದು ಒಳ್ಳೆಯದು. ಆಂಧ್ರ ಕಂಟ್ರಾಕ್ಟರ್ ಬಂದು ಅವರು ಆಂಧ್ರದ ಮುಖ್ಯ ಮಂತ್ರಿಗಳು ಹೇಳಿ ಕೊಟ್ಟು ಕೆಲಸ ನಿಧಾನ ಮಾಡಿದರೆ ನಮಗೆ ತೊಂದರೆ ಆಗಬಹುದು ಎಂದು ಹೇಳಿದ್ದಾರೆ, this may send wrong signals. I request you kindly to expunge it.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ರಾಜ್ಯದ ಹಿತ ದೃಷ್ಟಿಯಿಂದ ಅದು ಸರಿಯಿಲ್ಲ ಎಂದರೆ ಅದನ್ನು ನೀವು ತೆಗೆಸಬಹುದು. I agree.

ಛೇರ್ಮನ್:- ಖರ್ಗೆಯವರೇ ಅದನ್ನು ವಾಪಸ್ ತೆಗೆದುಕೊಂಡಿದ್ದಾರೆ. ರಾಜ್ಯದ ಹಿತದೃಷ್ಟಿಯಿಂದ ವಾಪಸ್ ತೆಗೆದುಕೊಂಡಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮುಖ್ಯ ಮಂತ್ರಿಗಳೇ ಬಹಿರಂಗವಾಗಿ ಸುಪ್ರೀಂ ಕೋರ್ಟಿಗೆ ಹೋಗುತ್ತೇನೆ ಎನ್ನತಕ್ಕ ಮತ್ತು ಜುರಾಲಾ ಪ್ರಾಜೆಕ್ಟ್‌ಗೆ ಅವರು 19 ಕೋಟಿ ಕೊಡತಕ್ಕ ಹಣ, ಇದನ್ನು ಕೊಡುತ್ತಿಲ್ಲ; ಅದಕ್ಕಾಗಿ ಅವರ ಮೇಲಂತೂ ನಾವು ಹೇಳಲೇಬೇಕಾಗುತ್ತದೆ. ಏಕೆಂದರೆ ಅವರ ಮಾತು ಕಟ್ಟಿಕೊಂಡು ಯಾರಾದರೂ ಇಲ್ಲಿ ಆ ರೀತಿ ವರ್ತನೆ ಮಾಡಬಾರದು ಎನ್ನುವುದಕ್ಕೆ ನೀವು ಪ್ರಿಕಾಶನ್ ತೆಗೆದುಕೊಳ್ಳಿ ಎನ್ನುವ ಮಾತು ನಾನು ಹೇಳುತ್ತಿದ್ದೇನೆಯೇ ಹೊರತು ಅವರ ಮೇಲೆ

ಛೇರ್ಮನ್:- ಅದು ಪ್ರೆಸ್‌ಗೆ ಬರುವುದು ಬೇಡ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಾನು ಹೇಳಿದನೆಲ್ಲ. ಅದಕ್ಕಾಗಿ ನಾನು ಅವರ ಮೇಲೆ ಅಸ್ಪರ್ಷನ್ ಮಾಡುತ್ತಿಲ್ಲ, ಆದರೆ ಪ್ರಕಾಶನ್ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇನೆ. ಇದರ ಬಗ್ಗೆ ತಾವು ಚಿಂತನೆ ಮಾಡುತ್ತೀರಿ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇನ್ನೂ ಅನೇಕ ವಿಷಯಗಳು ಇವೆ. ಆದರೆ ಏಕ ಕಾಲದಲ್ಲಿ ಎಷ್ಟರ ಮಟ್ಟಿಗೆ ನಾವು ಪ್ರಸ್ತಾಪ ಮಾಡಿ ಉತ್ತರ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗಬಹುದೋ ನನಗೆ ಗೊತ್ತಿಲ್ಲ. ಆದರೆ ಇಷ್ಟು ಮಾತ್ರ ತಮ್ಮ ಮುಖಾಂತರ ಅರಿಕೆ ಮಾಡಿಕೊಳ್ಳುತ್ತೇನೆ. ಈ 9 ಸಾವಿರ ಕೋಟಿ ರೂಪಾಯಿಗಳನ್ನು ಎರಡು ಸಾವಿರ ಇಸವಿಯೊಳಗಾಗಿ ಕೃಷ್ಣಾ ಬೇಸಿನ್‌ನಲ್ಲಿರತಕ್ಕಂಥ ಈ ಎಲ್ಲಾ ಪ್ರಾಜೆಕ್ಟ್‌ಗಳಿಗೆ ಖರ್ಚು ಮಾಡಬೇಕು. ಏಕೆಂದರೆ ಈ ನೀರಾವರಿ ಇಲಾಖೆಯನ್ನು ಮುಖ್ಯ ಮಂತ್ರಿಯವರೆ ಇಟ್ಟುಕೊಂಡಿರುವ ಕಾರಣ ಅದರ ಜವಾಬ್ದಾರಿ ಹೆಚ್ಚಿನದು ಆಗುತ್ತದೆ. ನೀರಾವರಿ ಇಲಾಖೆಗೆ ನಾನು ಯೋಗ್ಯ, ನನಗೆ ರೆಸ್ಪಾನ್ಸಿಬಿಲಿಟಿ ಇದೆ ಎಂದು ಹೇಳಿಕೊಂಡೇ ಅವರು ಈ ಇಲಾಖೆಯನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ಕನಿಷ್ಟ ಪಕ್ಷ ತಿಂಗಳಿಗೆ

ಒಮ್ಮೆಯಾದರೂ ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕ ಪ್ರಾಜೆಕ್ಟ್‌ಗಳ ರಿವ್ಯೂ ತಿಂಗಳಿಗೊಮ್ಮೆ ಮಾಡಿ, ಸದನಕ್ಕೆ ಪ್ರತಿ ತಿಂಗಳು ಪರ್‌ಫಾರ್ಮನ್ಸ್ ರಿಪೋರ್ಟ್ ರಾಜ್ಯದ ಹಿತದೃಷ್ಟಿಯಿಂದ ಕೊಡುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ನೀವು ಅನ್ನಬಹುದು ಏನು ಪ್ರತಿ ಸಲ ಎಲ್ಲಾ ತಂದು ನಿಮ್ಮ ಮುಂದೆ ಇಡಬೇಕಾ ಎಂದು? ಕೃಷ್ಣಾ ಬೇಸಿನ್ ಬಗ್ಗೆ ನಾವು ರಾಜಕೀಯ ಮಾಡುತ್ತಿಲ್ಲ. ಪೊಲಿಟಿಕಲಿ ಮೋಟಿವೇಟೆಡ್ ಅಲ್ಲ. ಈ ಪ್ರಾಜೆಕ್ಟ್‌ಗಳು ಆಗಬೇಕು. ಈ ಕೆಲಸ ಮುಗಿಯಬೇಕು ಎನ್ನುವ ದೃಷ್ಟಿಯಿಂದ ನಾನು ಕೇಳಿಕೊಳ್ಳುತ್ತಿದ್ದೇನೆ. ಅದಕ್ಕಾಗಿ ತಾವು ಪ್ರತಿ ವರ್ಷ ಕನಿಷ್ಟ ಪಕ್ಷ ಕೃಷ್ಣಾ ಬೇಸಿನ್‌ನಲ್ಲಿರತಕ್ಕ ಎಲ್ಲಾ ಪ್ರಾಜೆಕ್ಟ್‌ಗಳನ್ನು ಸೇರಿಸಿ ಎರಡು ಸಾವಿರ ಖರ್ಚು ಮಾಡತಕ್ಕ ಯೋಜನೆ ಹಾಕಿಕೊಳ್ಳಬೇಕು. ಪ್ರತಿ ತಿಂಗಳು ಇದರ ಬಗ್ಗೆ ರಿವ್ಯೂ ಮಾಡಬೇಕು. ಮತ್ತು ಅಲ್ಲಿರತಕ್ಕ ಚೀಫ್ ಇಂಜಿನಿಯರ್ ನಿಗಮದ ಅಧ್ಯಕ್ಷರೇ ಆಗಲೀ ಅಥವಾ ಚೀಫ್ ಇಂಜಿನಿಯರ್ (ಜನರಲ್) ಆಗಲೀ ಅವರಿಗೆ ಪ್ರತಿ ತಿಂಗಳು ಕರೆಸಬೇಕು. ಅವರಿಗೆ ಕೊಟ್ಟಂತಹ ಟಾರ್ಗೆಟ್ ರೀಚ್ ಆಗಲ್ಲಿಲ ಎಂದರೆ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕು. ಯಾರಾದರೂ ಇನ್ ಎಫಿಷಿಯಂಟ್ ಇದ್ದರೆ, ಅವರನ್ನು ತೆಗೆದು ಹಾಕಿ. ನಮಗೆ ಈಗ ಏನಾಯಿತು ಎಂದರೆ ಹೋದ ವರ್ಷ 9 ತಿಂಗಳು ಒಬ್ಬ ಅಧಿಕಾರಿ ಗವರ್ನಮೆಂಟ್ ಆರ್ಡರನ್ನು ರಾಂಗ್ ಇಂಟರ್‌ಪ್ರಿಟ್ ಮಾಡಿದ್ದಾನೆ ಎನ್ನತಕ್ಕ ಮಾತನ್ನು ಮುಖ್ಯ ಮಂತ್ರಿಗಳೇ ಹೇಳುತ್ತಿದ್ದರು. ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಿ. ಏಕೆ ತೆಗೆದುಕೊಳ್ಳಲಿಲ್ಲ. ನಮಗೆ ಹೇಳಿ ಎಂದರೆ ಸುಲಭವಾಗಿ ಹೇಳಿಕೊಂಡಿರಿ. ಇಲ್ಲ ರೆಸ್ಪಾನ್ಸಿಬಿಲಿಟಿ ಓನ್ ಮಾಡಿ, ಇಲ್ಲ ಯಾರು ಆಫೀಸರ್ ತಪ್ಪು ಮಾಡಿದ್ದಾರೆ ಅವರ ಮೇಲೆ ಜವಾಬ್ದಾರಿ ಫಿಕ್ಸ್ ಮಾಡಿ ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಿ. ಅಂದಾಗ ಏನು ಆಗುತ್ತದೆ ಎಂದರೆ ಒಂದು ಹೆದರಿಕೆ ಹುಟ್ಟುತ್ತದೆ. ಮತ್ತು ಈ ಕೆಲಸ ಪೂರ್ಣಗೊಳಿಸಬಹುದು ಎನ್ನತಕ್ಕ ಒಂದು ನಂಬಿಕೆ ನಮಗೆ ಬರುತ್ತದೆ. ಈಗ ಕನಿಷ್ಟ ಪಕ್ಷ ನಾವು ನೀರಾದರೂ ಹಿಡಿದು ಇಟ್ಟರೆ ನಾಳೆ ಉಪಯೋಗ ಮಾಡಿಕೊಳ್ಳಬಹುದು. ಇಲ್ಲವೆಂದರೆ ಇಡೀ ನಮ್ಮ ಕೃಷ್ಣಾ ಬೇಸಿನ್‌ನಲ್ಲಿರತಕ್ಕ ಎಲ್ಲಾ ಯೋಜನೆಗಳು ಕಂಪ್ಲೀಟ್ ಆಗಿ ನಾವು ಎಲ್ಲಾ ಜಮೀನುಗಳಿಗೆ ನೀರಾವರಿ ಕೊಡುತ್ತೇವೆ ಎನ್ನತಕ್ಕ ನಂಬಿಕೆ ನಮಗೇನೂ ಈಗ ಉಳಿದಿಲ್ಲ. ಏಕೆಂದರೆ ನಮ್ಮಲ್ಲಿರತಕ್ಕ ಅಂಕಿ ಸಂಖ್ಯೆ, ನಾವು ಹೋಗತಕ್ಕ ರೀತಿ ನೀತಿ, ನಾವು ಅಚೀವ್ ಮಾಡತಕ್ಕ ಫಿಸಿಕಲ್ ಟಾರ್ಗೆಟ್ ನೋಡಿದಾಗ ಖಂಡಿತವಾಗದ ನಾವು ಗುರಿ ಮುಟ್ಟುವುದಿಲ್ಲ ಎನ್ನತಕ್ಕ ಒಂದು ಹೆದರಿಕೆ ಬಂದಿದೆ. ಅದಕ್ಕಾಗಿ ಮಾನ್ಯ ಮುಖ್ಯ ನುಂತ್ರಿಗಳು ಯಾವ ರೀತಿಯಾಗಿ ಇದಕ್ಕೆ ಪರಿಹಾರ ಕೊಡುತ್ತಾರೆ ಎನ್ನತಕ್ಕ ಮಾತನ್ನು ಅವರು ಸ್ಪಷ್ಟವಾಗಿ ಹೇಳಬೇಕು ಮತ್ತು ಇದರ ಬಗ್ಗೆ ಒಂದು ಸ್ಪಷ್ಟವಾದಂತಹ ಕಾರ್ಯವನ್ನು ಅವರು ನಿರೂಪಿಸಬೇಕು. ಪದೇ ಪದೇ ಹಿಂದಿನ ಸರ್ಕಾರ ಏನು ಮಾಡಿದೆ ಎಂದು ಹೇಳುವುದನ್ನು ಬಿಟ್ಟು ಬಿಡಿ. ಹಾಗೆ ಹೇಳಿಕೊಳ್ಳುತ್ತಾ ಹೋದರೆ ನಿಮ್ಮದು 10 ವರ್ಷ ಆಯಿತಲ್ಲ; ನೀವು ಒಬ್ಬರೇ ಇದ್ದಿರಿ. ಏಳು ವರ್ಷ ಆದೂ ಡೀಡ್ ವರ್ಷ ಇದೂ ಎಂದರೆ ಹದಿನೈದು ತಿಂಗಳು. ಇವೆಲ್ಲಾ ಸೇರಿದರೆ ಎಂಟು ವರ್ಷ. 24 ವರ್ಷ ಪ್ರಾಜೆಕ್ಟ್‌ನಲ್ಲಿ ಮೂರನೇ ಒಂದು ಭಾಗ ನಿಮ್ಮ ಜವಾಬ್ದಾರಿ ಇದೆ. ಅದನ್ನು ಕೇಳುವುದಕ್ಕೆ ಆಗುತ್ತದಾ? ಸುಮಾರು ಮೂರನೇ ಒಂದು ಭಾಗ ನೀವೇ ಇರಿಗೇಷನ್ ಪೋರ್ಟ್‌ಪೋಲಿಯೋ ವಹಿಸಿಕೊಂಡಿದ್ದೀರಿ. ಅಂದರೆ You have to own the responsibility of one-third. ನಾವೆಲ್ಲೋ ರೆವಿನ್ಯೂ ಮಿನಿಸ್ಟರ್, ಕೋ-ಆಪರೇಷನ್ ಮಿನಿಸ್ಟರ್,

ಇಂಡಸ್ಟ್ರಿಯಲ್ ಮಿನಿಸ್ಟರ್ ಆಗಿ ಇಲಾಖೆಯಲ್ಲಿ ಇದ್ದಿರಬಹುದು. ನೀವು ಇದೇ ಇಲಾಖೆಯನ್ನು ವಹಿಸಿಕೊಂಡಿದ್ದೀರಿ. ಅದಕ್ಕೆ ನೀವು ಉತ್ತರ ಕೊಡಬೇಕಾಗುತ್ತದೆ. ಅದಕ್ಕಾಗಿ ಸುಮ್ಮನೆ ಬೇರೆಯವರ ಮೇಲೆ ಜವಾಬ್ದಾರಿ ಹಬ್ಬಿ ನೀವು ಅಲ್ಲಿನ ಜನರಿಗೆ ತಪ್ಪು ದಾರಿಗೆ ಅಥವಾ ಮೋಸ ಮಾಡತಕ್ಕದ್ದು ಮಾಡಬಾರದು ಎನ್ನತಕ್ಕ ಮಾತನ್ನುಹೇಳಿ ಪುನಃ ತಮ್ಮನ್ನು ಕೇಳಿಕೊಂಡು, ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್:- ಬಹಳ ಜನ ಸ್ನೇಹಿತರು ಮಾತನಾಡುವವರು ಇದ್ದಾರೆ. ಡಾ। ಮಲಕ ರೆಡ್ಡಿಯವರು, ಜೆ.ಟಿ. ಪಾಟೀಲರ್ ಅವರು, ಕುನ್ನೂರ್ ಅವರು ಎಲ್ಲಾ ಮಾತನಾಡುವವರು ಇದ್ದೀರಿ. ಈಗ ಸಭೆಯನ್ನು ಒಂದು ಗಂಟೆಗೆ ಮುಂದಕ್ಕೆ ಹಾಕಿ ಮತ್ತೆ ನಾವು ಮೂರೂವರೆ ಗಂಟೆಗೆ ಚರ್ಚೆ ಮುಂದುವರಿಸಬಹುದು, ಈಗ ಸಭೆಯನ್ನು ಒಂದು ಗಂಟೆ ಮುಂದಕ್ಕೆ ಹಾಕುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- 3.30 ಅಂದರೆ ಮೂರುವರೆಗೆ ಸೇರಬೆಕು.

ಛೇರ್ಮನ್:- ಸದಸ್ಯರು ಬಂದರೇ 3.30ಕ್ಕೆ ಸೇರೋಣ.

(ಸಭೆಯು 2.28ಕ್ಕೆ ಮುಕ್ತಾಯವಾಗಿ ಮತ್ತೆ 3.30ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನಃ ಸಂಜೆ 4 ಗಂಟೆಗೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು:- ಮಲ್ಲಿಕಾರ್ಜುನ ಖರ್ಗೆಯವರೆ ಮೊದಲು ವಿಧೇಯಕಗಳನ್ನು ತೆಗೆದುಕೊಳ್ಳೋಣ, ಆಷ್ಟು ಹೊತ್ತಿಗೆ ಮುಖ್ಯ ಮಂತ್ರಿಗಳು ಬರುತ್ತಾರೆ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕ, 1996

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ(ಬಂದರು ಮತ್ತು ಮೀನುಗಾರಿಕೆ ಇಲಾಖೆ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, 1996ರ ಕರ್ನಾಟಕ ಒಳನಾಡು ಮೀನುಗಾರಿಕೆ (ಸಂರಕ್ಷಣೆ, ಅಭಿವೃದ್ಧಿ ಮತ್ತು ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ(ಬಂದರು ಮತ್ತು ಮೀನುಗಾರಿಕೆ ಇಲಾಖೆ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಈವರೆಗೆ ಜಾರಿಯಲ್ಲಿರುವ ಅಧಿನಿಯಮಗಳು ಬೇರೆ ಬೇರೆ ಭಾಗಕ್ಕೆ ಬೇರೆ ಬೇರೆ ಇತ್ತು. ಭಾರತೀಯ ಮೀನುಗಾರಿಕಾ ಅಧಿನಿಯಮ 1897, ಮೀನುಗಾರಿಕಾ ಮದ್ರಾಸ್ ತಿದ್ದುಪಡಿ 1927, ಹೈದರಾಬಾದ್ ಮೀನುಗಾರಿಕಾ ಅಧಿನಿಯಮ 1956, ಹಾಗೂ ಮೈಸೂರು ಬೇಟೆ ಮತ್ತು ಮೀನುಗಾರಿಕಾ ಸಂರಕ್ಷಣಾ ಅಧಿನಿಯಮ 1901, ಇದೆಲ್ಲವನ್ನು ಸಮೀಕರಿಸಿ ಸಮಗ್ರವಾಗಿ ಒಂದೇ ಶಾಸನವನ್ನು ಮಾಡಬೇಕೆಂದು ಈಗ ಒಂದು ವಿಧೇಯಕವನ್ನು ತಂದಿದ್ದೇವೆ. ಇದರಲ್ಲಿ ಪರವಾನಿಗೆಯನ್ನು ಪಡೆದು ಮೀನುಗಾರಿಕೆಯನ್ನು ಮಾಡುವಂತಹದ್ದು, ಈಗ ನಾಶವಾಗುವಂತಹ ತಳಿಗಳನ್ನು ಸಂರಕ್ಷಣೆ ಮಾಡುವ ಉದ್ದೇಶದಿಂದ ಹಾಗೂ ಪರವಾನಿಗೆ ಪಡೆದು ಮೀನು ಮರಿಗಳನ್ನು ಉತ್ಪಾದನೆ ಮಾಡುವಂತಹದ್ದು ಇಂತಹ ಅನೇಕ ನಿಯಮಗಳನ್ನು ತಂದಿದ್ದೇವೆ. ಆಮೇಲೆ ಇದುವರೆಗೆ